ಕರ್ನಾಟಕ ವಿಧಾನ ಸಭೆ

ಸೋಮವಾರ 28ನೇ ಜುಲೈ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಹಾಲಿ ಸದಸ್ಯರುಗಳಾಗಿದ್ದ ಶ್ರೀ ವೈ. ರಾಮಕೃಷ್ಣ, ಶ್ರೀ ಶ್ರೀ ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ, ಮಾಜಿ ಸದಸ್ಯರುಗಳಾಗಿದ್ದ ಶ್ರೀ ಎನ್. ಜಿ. ಹಾಲಪ್ಪ, ಶ್ರೀ ವಿಠಲದಾಸ್ ಶೆಟ್ಟಿ, ಶ್ರೀ ವೈ. ಮಂಜಯ್ಯ ಶೆಟ್ಟಿ, ಡಾ।। ಭೋಜರಾಜ, ಶ್ರೀ ಪಿ. ವಿ. ಐತಾಳಿ, ಖ್ಯಾತ ಲೇಖಕಿ ಶ್ರೀಮತಿ ಚಿ.ನ. ಮಂಗಳ ಮತ್ತು ಆಚಾರ್ಯ ಶ್ರೀ ತುಳಸಿ, ಇವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಮಾಜಿ ಸಚಿವರಾದ ಶ್ರೀ ವೈ. ರಾಮಕೃಷ್ಣ ಇವರು ಕಲಾ ಮತ್ತು ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಸಮಾಜ ಸೇವಕರೂ, ಕರ್ನಾಟಕ ಪ್ರದೇಶ ಜನತಾ ಪಕ್ಷದ ಉಪಾಧ್ಯಕ್ಷರೂ, ರಾಷ್ಟ್ರೀಯ ಜನತಾ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಕರ್ನಾಟಕದ 2,3,4,6 ಮತ್ತು 7ನೇ ವಿಧಾನ ಸಭೆಯ ಸದಸ್ಯರಾಗಿದ್ದರು. ಪಶುಸಂಗೋಪನಾ ಮತ್ತು ಮೀನುಗಾರಿಕೆ, ಆರೋಗ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. 1989ರಿಂದ 1991ರ ಅವಧಿಯಲ್ಲಿ ಲೋಕಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 1994ನೇ ಡಿಸೆಂಬರ್‌ನಲ್ಲಿ ಆನೇಕಲ್ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದಿಂದ 10ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಶ್ರೀ ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ ವಿಧಾನ ಸಭಾ ಸದಸ್ಯರು, ದಿನಾಂಕ 23-6-97 ರಂದು ರಸ್ತೆ ಅಪಘಾತದಲ್ಲಿ ನಿಧನರಾದರು. ಇವರ ಆಕಸ್ಮಿಕ ಹಾಗೂ ಅಕಾಲಿಕ ಅಗಲಿಕೆ ಈ ಸದನದ ಸದಸ್ಯ ಗೆಳೆಯರಿಗೆಲ್ಲ ಅತೀವ ವೇದನೆಯನ್ನುಂಟು ಮಾಡಿದೆ. ಶ್ರೀಯುತರು ವಿಜ್ಞಾನ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಜಿಲ್ಲಾ ಯುವ ಕಾಂಗ್ರೆಸ್ (ಐ) ಅಧ್ಯಕ್ಷರಾಗಿ, ಕಿಸಾನ್ ಸೆಲ್ ಅಧ್ಯಕ್ಷರಾಗಿ, ಅಳ್ನಾವರ ಮುನಿಸಿಪಲ್ ಕೌನ್ಸಿಲ್ ಸದಸ್ಯರಾಗಿ, ಧಾರವಾಡ ಪಿ.ಎಲ್.ಡಿ. ಬ್ಯಾಂಕಿನ ಸದಸ್ಯರಾಗಿ, ಧಾರವಾಡ ಜಿಲ್ಲಾ

ಕಾಂಗ್ರೆಸ್ (ಐ) ಸಮಿತಿಯ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಇವರು 10ನೇ ವಿಧಾನ ಸಭೆಗೆ ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಚುನಾಯಿತರಾಗಿ, ವಿಧಾನ ಮಂಡಲದ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ ಹಾಗೂ ಅರ್ಜಿಗಳ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಕ್ಷೇತ್ರದ ಸಾಮಾನ್ಯ ಜನರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದ, ಸೌಜನ್ಯದ ನಡವಳಿಕೆಗೆ ಹೆಸರಾಗಿದ್ದ ಜನಾನುರಾಗಿ ಅಂಬಡಗಟ್ಟಿಯವರ ಅಗಲಿಕೆಯಿಂದ, ಚುರುಕಾಗಿ ಕೆಲಸ ಮಾಡುತ್ತಿದ್ದ ಉದಯೋನ್ಮುಖ ಶಾಸಕನನ್ನು ಆ ಕ್ಷೇತ್ರದ ಜನತೆ ಕಳೆದುಕೊಂಡಂತಾಗಿದೆ.

ಮಾಜಿ ಸಚಿವರಾದ ಶ್ರೀ ಎಸ್. ಜಿ. ಹಾಲಪ್ಪನವರು ಬಿ.ಎ.ಬಿ.ಎಲ್. ಪದವೀಧರರಾಗಿದ್ದು, ಶ್ರೀಯುತರು ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು ಸಮಾಜ ಸೇವಕರಾಗಿದ್ದು, 4.5 ಮತ್ತು 9ನೇ ವಿಧಾನ ಸಭೆಗೆ ಚಿನ್ನಗಿರಿ ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ ಶ್ರೀ ವೀರಪ್ಪ ಮೊಯಿಲಿಯವರ ಸಚಿವ ಸಂಪುಟದಲ್ಲಿ ಪರಿಸರ ಖಾತೆ ಸಚಿವರಾಗಿದ್ದರು.

ಮಾಜಿ ಸಚಿವರಾದ ಶ್ರೀ ವಿಠಲ ದಾಸ ಶೆಟ್ಟಿ, ಇವರು ದಿನಾಂಕ 29.6.1997 ರಂದು ನಿಧನರಾಗಿರುತ್ತಾರೆ. ಶ್ರೀಯುತರು 1940ರಲ್ಲಿ ರಾಜಕೀಯ ಪ್ರವೇಶಿಸಿ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಕೃಷಿಕ ಕುಟುಂಬದಿಂದ ಬಂದವರಾಗಿದ್ದು 1967-71ರ ವಿಧಾನ ಸಭೆಯ ಸದಸ್ಯರಾಗಿದ್ದು, 1968ರಲ್ಲಿ ದಿವಂಗತ ಶ್ರೀ ವೀರೇಂದ್ರ ಪಾಟೀಲ್‌ರ ಸಂಪುಟದಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಾಗಿದ್ದರು.

ಮಾಜಿ ಸದಸ್ಯರಾದ ಡಾ. ಭೋಜರಾಜ ಇವರು ದಿನಾಂಕ 6-7-1997ರಂದು ನಿಧನರಾಗಿರುತ್ತಾರೆ. ಶ್ರೀಯುತರು ಸಮಾಜ ಸೇವಕರಾಗಿದ್ದು, ಶ್ರೀಯುತ ತಾರಾನಾಥರವರ ಶಿಷ್ಯರಾಗಿದ್ದರು. 1962 ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಯಾದಗಿರಿಯಿಂದ ಸ್ಪರ್ಧಿಸಿ ಶಾಸಕರಾಗಿದ್ದರು.

ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ವೈ. ಮಂಜಯ್ಯ ಶೆಟ್ಟಿ ಇವರು ದಿನಾಂಕ 4-7-1997ರಂದು ನಿಧನರಾಗಿರುತ್ತಾರೆ. ಶ್ರೀಯುತರು ಮದ್ರಾಸ್ ವಿಧಾನ ಸಭಾ ಸದಸ್ಯರಾಗಿದ್ದು ತದನಂತರ ಎರಡನೇ ಮತ್ತು ಮೂರನೇ ಕರ್ನಾಟಕ ವಿಧಾನ ಸಭೆಗೆ ಪುನರಾಯ್ಕೆಯಾಗಿದ್ದರು.

ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ವಿ. ಐತಾಳ್ ಇವರು ದಿನಾಂಕ 30-6-1997 ರಂದು ನಿಧನರಾಗಿರುತ್ತಾರೆ. ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದು ಮದ್ರಾಸ್ ಹಾಗೂ ಮಂಗಳೂರಿನ ಸರ್ಕಾರದ ಸಚಿವಾಲಯದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು 1962-67ರ ಅವಧಿಗೆ ವಿಧಾನ ಸಭಾ ಸದಸ್ಯರಾಗಿ ಸುರತ್ಕಲ್ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಖ್ಯಾತ ಲೇಖಕಿ ಹಾಗೂ ಮಾನವತಾವಾದಿ ಶ್ರೀಮತಿ ಚಿ. ನ. ಮಂಗಳ ಇವರು ದಿನಾಂಕ 31-5-1997ರಂದು ನಿಧನರಾದರು. ಇವರು ನಗರದ ಎಸ್.ಎಂ.ಕೆ.ಆರ್.ವಿ. ಕಾಲೇಜ್‌ನಲ್ಲಿ ಅಧ್ಯಾಪಕರಾಗಿ ಸುಮಾರು 30ಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸಿದ್ದರು.

ಶ್ರೀಮತಿ ಚಿ. ನ. ಮಂಗಳರವರು ಶಿಕ್ಷಣ ಪಡೆಯತಕ್ಕಂತಹ ಹೆಣ್ಣು ಮಕ್ಕಳು ವಿವಿಧ ಉದ್ಯೋಗಗಳನ್ನು ಅವಲಂಬಿಸಲು ಹೊಸ ಹೊಸ ಶೈಕ್ಷಣಿಕ ಪ್ರಯೋಗಗಳನ್ನು ಮಾಡತಕ್ಕಂತಹ ವಿಚಾರದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿದಂತಹ ಧೀಮಂತ ಮಹಿಳೆಯಾಗಿದ್ದರು.

ಆಚಾರ್ಯ ಶ್ರೀ ತುಳಸಿರವರು ದಿನಾಂಕ : 23-6-1997ರಂದು ರಾಜಸ್ತಾನದ ಬಿಕನೇರ್ ಜಿಲ್ಲೆಯ ಗಂಗಾ ಪಟ್ಟಣದಲ್ಲಿ ನಿಧನರಾದರು. ಶ್ರೀಯುತರು ಜೈನಶ್ವೇತಾಂಬರ ತೇರಾ ಪಂಥದ ಆಚಾರ್ಯರು. ಅವರು ನೀಡಿದ ಸಂದೇಶ ಇಡೀ ವಿಶ್ವಕ್ಕೆ ಅನ್ವಯಿಸುವಂತದ್ದಾಗಿತ್ತು, ಅಹಿಂಸೆ, ಸತ್ಯ, ಬ್ರಹ್ಮಚರ್ಯ, ಅಪರಿಗ್ರಹ ಇವು ಆಚಾರ್ಯ ತುಳಸಿ ಪ್ರಣೀತ ಅಣುವ್ರತದ ನಿರ್ದೇಶಕ ತತ್ವಗಳು. ರಾಜಸ್ತಾನದ ಲಾಡ್ನೂನ್ ಎಂಬಲ್ಲಿ ಹುಟ್ಟಿದ ಆಚಾರ್ಯರು ತಮ್ಮ ಹನ್ನೊಂದನೇ ವಯಸ್ಸಿನಲ್ಲಿ ಜೈನಮುನಿ ಹಾಗೂ ತೇರಾಪಂಥದ ನಿರ್ವಹಣೆಯ ಹೊಣೆ ವಹಿಸಿಕೊಂಡರು. 1971ರಲ್ಲಿ ರಾಷ್ಟ್ರಪತಿಗಳಿಂದ "ಯುಗಪ್ರಧಾನ" ಎಂಬ ಬಿರುದನ್ನು ಪಡೆದ ಅವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಮಹಾತ್ಮಗಾಂಧಿಯವರ ಸಮಾಧಿಯ ಬಳಿ ದಿನಾಂಕ 30ನೇ ಡಿಸೆಂಬರ್ 1956ರಂದು ಆಚಾರ್ಯರು ಅಣುವೃತ್ತ ಅಂದೋಲನ ಏರ್ಪಡಿಸಿ "ಮೈತ್ರಿ ದಿವಸ ಸಮಾರಂಭ" ವನ್ನು ಪ್ರಾರಂಭಿಸಿದರು.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ವ್ಯಕ್ತಪಡಿಸಿರತಕ್ಕಂತಹ ಭಾವನೆಗಳಿಗೆ ನಾನು ಪುರಸ್ಕರಿಸುತ್ತಾ, ಇವರಲ್ಲಿ ಶ್ರೀ ವೈ. ರಾಮಕೃಷ್ಣರವರು, ಎಸ್. ಜಿ. ಹಾಲಪ್ಪನವರು ನನಗೆ ವೈಯಕ್ತಿಕವಾಗಿ ಬಹಳ ಹತ್ತಿರದ ಸ್ನೇಹಿತರಾಗಿದ್ದರು. ನಾವು ಮತ್ತು ಅವರುಗಳು ಒಂದೇ ಪಕ್ಷದಲ್ಲಿ ಕೆಲವು ವರ್ಷಗಳ ಹಿಂದೆ ಕೆಲಸ ಮಾಡಿದಂತಹ ಅನುಭವ ಇದೆ. ಶ್ರೀ ವೈ. ರಾಮಕೃಷ್ಣರವರು ರಾಜಕೀಯವಾಗಿ ಹೇಗೆ ಅನುಭವಸ್ಥರೋ ಹಾಗೆಯೇ ಸಂಸದೀಯ ವ್ಯವಹಾರಗಳಲ್ಲಿ ಬಹಳ

ಜಾಗರುಕರಾಗಿದ್ದರು. ಚಿಕ್ಕ ವಯಸ್ಸಿನವರು ಅವರ ಅನುಭವವನ್ನು ನೋಡಿ ಕಲಿತುಕೊಳ್ಳಬೇಕು. ಕಾನೂನಿನ ರೀತಿಯಾಗಲಿ, ಯಾವುದೇ ಬಿಲ್‌ನ್ನು ಮಂಡಿಸಿದ ತಕ್ಷಣ ಅವರು ಮೊದಲು ಎದ್ದು ಆ ಬಿಲ್‌ನ ಕಮೆಂಟ್ಸ್ ಪರವಾಗಿ ಇರಲಿ ಅಥವಾ ವಿರುದ್ಧವಾಗಿ ಇರಲಿ ಬಹಳ ಸ್ಟಡಿಯನ್ ಆಗಿದ್ದರು. ನಾನು ಮತ್ತು ಅವರು ಒಂದೇ ಪಕ್ಷದಲ್ಲಿದ್ದಾಗ ಸಾಮಾನ್ಯವಾಗಿ ಅವರ ಮನೆಯಲ್ಲಿ ಆಗಾಗ ಊಟಕ್ಕೆ ಹೋಗುತ್ತಿದ್ದೆ. ಅವರು ಕೆಲವು ವಿಷಯಗಳಲ್ಲಿ ಬರೀ ದಲಿತರ ನಾಯಕರಾಗಿರಲಿಲ್ಲ. ಅವರು ಎಲ್ಲಾ ಜನಾಂಗಗಳ ಬಗ್ಗೆಯೂ ಅಷ್ಟೇ ಹಿತ ರಕ್ಷಣೆಯ ಮನೋಭಾವ, ವಿಶಾಲತೆಯನ್ನು ಹೊಂದಿದ್ದರು. ಸಾಮಾನ್ಯವಾಗಿ ನಾವು ಸಂಪ್ರದಾಯದ ಪ್ರಕಾರವಾಗಿ ಅವರನ್ನು ಕಳೆದುಕೊಂಡಿದ್ದೆವೆಂದು ಹೇಳುತ್ತೇವೆ. ಆದರೆ ಈ ವಿಧಾನ ಸಭೆಯಲ್ಲಿ ಅವರ ಕೊಡುಗೆ, ಅವರ ಪರಿಶ್ರಮ, ಅವರ ಸಲಹೆಗಳು ಅತ್ಯಂತ ಉತ್ತಮವಾದುದಾಗಿದ್ದವು. ಅವರ ಇಲ್ಲದಿರುವಿಕೆ ನಿಜವಾಗಿಯೂ ಕೂಡ ಈ ಸಭೆಗೆ ನಷ್ಟವಾಗಿದೆ ಎಂದು ನಾನು ಹೇಳುತ್ತೇನೆ. ಅವರನ್ನು ಕಳೆದುಕೊಂಡಂತಹ ಕುಟುಂಬ ವರ್ಗದವರಿಗೆ ಆ ಒಂದು ದುಃಖವನ್ನು ಸಹಿಸುವಂತಹ ಶಕ್ತಿಯನ್ನು ಭರಿಸಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಶ್ರೀಕಾಂತ ಅಂಬಡಗಟ್ಟಿಯವರು ಯುವಕರಾಗಿದ್ದರು ಅವರು ವಿಧಾನ ಸಭೆಯ ಕಾರ್ಯಕಲಾಪಗಳಲ್ಲಿ ಬಹಳ ಚುರುಕಾಗಿ ಕೆಲಸವನ್ನು ಮಾಡತಕ್ಕಂತಹ ಆಸಕ್ತಿಯನ್ನು ಹೊಂದಿದ್ದರು. ಆದರೆ ದುರ್ದೈವತ್ ಅವರು ರಸ್ತೆಯ ಅಪಘಾತದಲ್ಲಿ ನಿಧನ ಹೊಂದಿದ್ದಾರೆ. ಶ್ರೀಯುತರು ವಯಸ್ಸಿನಲ್ಲಿ ಬಹಳ ಚಿಕ್ಕವರಾಗಿದ್ದರಿಂದ ಅವರ ಕುಟುಂಬದಲ್ಲಿ ಬಹಳ ದುಃಖವಾಗಿರುತ್ತದೆ. ಅವರ ಕುಟುಂಬದವರ ದುಃಖಕ್ಕೆ ನಾನು ಸಂತಾಪ ಸೂಚನೆಯನ್ನು ವ್ಯಕ್ತಪಡಿಸಿ ಆ ಒಂದು ದುಃಖಕ್ಕೆ ನಾನು ಸಂತಾಪ ಸೂಚನೆಯನ್ನು ವ್ಯಕ್ತಪಡಿಸಿ ಆ ಒಂದು ದುಃಖವನ್ನು ಕುಟುಂಬ ವರ್ಗದವರು ಸಹಿಸಿಕೊಳ್ಳುವಂತಹ ಶಕ್ತಿಯನ್ನು ಭರಿಸಲಿ ಎಂದು ಪ್ರಾರ್ಥಿಸುತ್ತೇನೆ. ಹಾಗೆಯೇ ದಿವಂಗತ ಎನ್. ಜಿ. ಹಾಲಪ್ಪನವರನ್ನು ನೆನಪು ಮಾಡಿಕೊಳ್ಳಲು ಇದೊಂದು ವಿಶೇಷ ಸಂದರ್ಭ, ಅವರು ವೃತ್ತಿಯಾಗಲಿ ವಕೀಲರಾಗಿದ್ದರು, ಅವರಿಗೆ ರಾಜಕಾರಣದಲ್ಲಿ ಅಂಥ ಆಸಕ್ತಿ ಇರಲಿಲ್ಲ. ಒಳ್ಳೆಯ ವಕೀಲರಾಗಿದ್ದರು. ಶಿವಮೊಗ್ಗದಲ್ಲಿದ್ದಾಗ ತುಂಬಾ ಚೆನ್ನಾಗಿ ಪ್ರಾಕ್ಟೀಸ್ ಇತ್ತು. 1967ನೇ ಇಸವಿಯಲ್ಲಿ ನಮ್ಮ ಪಾರ್ಟಿಯೇ ಆದ ಸೋಸಿಯಲಿಸ್ಟ್‌ನಲ್ಲಿ ಚನ್ನಗಿರಿ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಸದಸ್ಯರಾದರು. ಮತ್ತೆ ಕಾರಣಾಂತರದಿಂದ ಏನೇನು ಬದಲಾವಣೆಗಳು ಆಯಿತು. ಅವರು ನಮ್ಮ ಪಾರ್ಟಿಯನ್ನು ಬಿಟ್ಟು ಕಾಂಗ್ರೆಸ್ ಪಾರ್ಟಿಯನ್ನು ಸೇರಿ ಅದೇ ಚನ್ನಗಿರಿಯಲ್ಲಿ ನನ್ನ ಎದುರು ಚುನಾವಣೆಗೆ ನಿಂತುಗೆದ್ದರು. ಎರಡು ಸಾರಿ ನನ್ನನ್ನು ಸೋಲಿಸಿದರು. ಏನೇ ಗೆದ್ದರೂ ಸೋತರು ವೈಯಕ್ತಿಕವಾಗಿ ನಮ್ಮ ವಿಶ್ವಾಸ ಮತ್ತು ಸ್ನೇಹವನ್ನು ನಾನು ಕಳೆದುಕೊಳ್ಳಲಿಲ್ಲ. ಚನ್ನಗಿರಿ

ಕ್ಷೇತ್ರದಲ್ಲಿ ಸ್ವಲ್ಪ ಒರಟುತನ, ಚುನಾವಣೆಯ ಸಮಯದಲ್ಲಿ ಹೊಡೆದಾಟ ಇದೆಲ್ಲ ಸ್ವಾಭಾವಿಕವಾದುದು ಆದರೆ ನಮ್ಮಿಬ್ಬರ ಮಧ್ಯೆ ಯಾವುದೇ ವಿಷವಾಗಲಿ, ದ್ವೇಷವಾಗಲಿ ಉಳಿಯಲಿಲ್ಲ. ಮೊನ್ನೆ ಮೊನ್ನೆ ಅವರು ಅನಾರೋಗ್ಯದಿಂದ ಬಹಳವಾಗಿ ಬಳಲಿದ್ದರು. ನಾನು ಅವರ ಮನೆಗೆಹೋಗಿ ನೋಡಿ ನೀನು ಬೆಂಗಳೂರಿಗೆ ಬಾರಪ್ಪ ಇನ್ನೂ ಹೆಚ್ಚಿನ ಚಿಕಿತ್ಸೆ ಮತ್ತು ಪರೀಕ್ಷೆಯನ್ನು ಮಾಡಿಸೋಣವೆಂದು ಹೇಳಿದ್ದೆ. ಅದಕ್ಕೆ ಅವರು ಒಪ್ಪಿಕೊಂಡು ಬೆಂಗಳೂರಿಗೆ ಬಾರಪ್ಪ ಇನ್ನೂ ಹೆಚ್ಚಿನ ಚಿಕಿತ್ಸೆ ಮತ್ತು ಪರೀಕ್ಷೆಯನ್ನು ಮಾಡಿಸೋಣವೆಂದು ಹೇಳಿದ್ದೆ. ಅದಕ್ಕೆ ಅವರು ಒಪ್ಪಿಕೊಂಡು ಬೆಂಗಳೂರಿಗೆ ಬಂದಿದ್ದರಂತೆ, ನಾನು ಆ ಸಮಯದಲ್ಲಿ ವಿದೇಶಕ್ಕೆ ಹೋಗಿದ್ದೆ. ಅನಂತರ ಅವರ ನಿಧನವಾಯಿತು. ಅವರ ಕುಟುಂಬದವರೆಲ್ಲ ನನಗೆ ಬಹಳ ಹತ್ತಿರದವರು, ಅವರ ಊರಿಗೂ ಸಹ ಹೋಗಿದ್ದೆ. ನನ್ನ ದುಃಖವನ್ನು ಕೂಡ ಅವರಿಗೂ ವ್ಯಕ್ತಪಡಿಸಿದ್ದೆ. ಇವತ್ತು ಸದನದಲ್ಲಿ ಮತ್ತೊಮ್ಮೆ ನೆನೆಸಿಕೊಂಡು ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಇನ್ನು ವಿಠಲದಾಶೆಟ್ಟಿಯವರು ಪರಿಚಯ ನನಗೆ ಅಷ್ಟು ಇರಲಿಲ್ಲ ಅವರು ಈ ಸದನದ ಕಾರ್ಯಕಾಲಾಪಗಳಲ್ಲಿ ಬಹಳ ಚೆನ್ನಾಗಿ ಭಾಗವಹಿಸುತ್ತಿದ್ದರು ಎಂದು ಕೇಳಿದ್ದೇನೆ. ಅವರಿಗೂ ಸಹ ಈ ಸದನದ ಪರವಾಗಿ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ದಿವಂಗತ ಭೋಜರಾಜ್‌ರವರಿಗೆ ಹಾಗೂ ದಿವಂಗತ ಮಂಜುನಾಥ್ ರವರಿಗೆ, ದಿವಂಗತ ಇತ್ಯಾರವರಿಗೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಖ್ಯಾತ ಲೇಖಕಿ ದಿವಂಗತ ಚಿ.ನ.ಮಂಗಳ ಅವರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಕೆಲವು ವಿಷಯಗಳಲ್ಲಿ ನಮ್ಮ ವಿಚಾರಗಳು ಪರಸ್ಪರ ವಿರುದ್ಧವಾಗಿದ್ದರೂ, ಅವರ ಎಲ್ಲಾ ವಿಚಾರಗಳನ್ನು ನಾನು ಒಪ್ಪದೇ ಇದ್ದರೂ ನನ್ನ ಅನಿಸಿಕೆಗಳನ್ನು ಅವರು ಒಪ್ಪದೇ ಇದ್ದರೂ, ವಿಚಾರ ವಿನಿಮಯ ಮಾಡಿಕೊಳ್ಳುವಂತಹ ಒಂದು ಹೃದಯವಿತ್ತು. ಅವರ ವಿಚಾರಗಳು ಬಹಳ ಕ್ರಾಂತಿಕಾರವಾಗಿರುತ್ತಿತ್ತು.

ಅವರ ನಿಧನದಿಂದ ನಮ್ಮ ನಾಡಿಗೆ ನಷ್ಟ. ಅವರು ವಿಧಾನಸಭೆಗೆ ಸಂಬಂಧ ಇಲ್ಲದಿದ್ದರೂ ನಾಡಿಗೆ ನಷ್ಟ ಎಂದು ಹೇಳಿ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತೇನೆ. ಶ್ರೀ ತುಳಸಿ ಅವರದೇ ಆದ ರೀತಿಯಲ್ಲಿ ದೇಶಕ್ಕೆ ಸೇವೆಯನ್ನು ಸಲ್ಲಿಸಿದ್ದರು. ಕ್ರೌರ್ಯ ಮತ್ತು ಹಿಂಸೆ ಬೆಳೆಯುತ್ತಿರುವ ಈಗಿನ ಸಮಯದಲ್ಲಿ ಅಂಥವರ ಅವಶ್ಯಕತೆ ಇತ್ತುಎಂದು ಇಷ್ಟು ಮಾತ್ರ ಹೇಳಿ ನಾನು ತಮ್ಮೊಡನೆ ಈ ಸಂತಾಪ ಸೂಚಕ ಸಭೆಯಲ್ಲಿ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ತಾವುಮಂಡಿಸಿದಂತಹ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಇವತ್ತು ಶ್ರೀಮಾನ್ ವೈ. ರಾಮಕೃಷ್ಣ ಅವರನ್ನು ಈ ಸದನ ಕಳೆದುಕೊಂಡಿರುವುದರಿಂದ ಈ ಸದನಕ್ಕೆ ಹಾನಿಯಾಗಿದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ವಿಶೇಷವಾಗಿ ದಲಿತ ಸಮಾಜದಲ್ಲಿ ಹುಟ್ಟಿ ಸತತವಾಗಿ 6-7 ಸಾರಿ ಆರಿಸಿ ಬರತಕ್ಕದ್ದು ಬಹಳ ವಿರಳ ಮತ್ತು ಕಷ್ಟ. ಅದರಲ್ಲೂ ಬೆಂಗಳೂರು ಜಿಲ್ಲೆಯಲ್ಲಿ ಸತತವಾಗಿ ಆರಿಸಿ ಬರತಕ್ಕದ್ದು ಇನ್ನೂ ಕಷ್ಟ. ಅಂಥದ್ದರಲ್ಲಿ ಅವರು ಸುಮಾರು 20-25 ವರ್ಷಗಳಿಂದ ಅನೇಕಲ್ ಕ್ಷೇತ್ರದಿಂದ ಆರಿಸಿ ಬಂದು ಕೇವಲ ಆ ಕ್ಷೇತ್ರಕ್ಕೆ ಮಾತ್ರ ಅವರ ಸೇವೆ ಸೀಮಿತವಾಗಿರಲಿಲ್ಲ, ಇಡೀ ರಾಜ್ಯಕ್ಕೆ ಅವರು ತಮ್ಮ ಕೊಡುಗೆಯನ್ನೂ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಈ ಸದನದಲ್ಲಿ ಯಾವುದೇ ಒಂದು ಕಾನೂನಿಗೆ ಸಂಬಂಧಪಟ್ಟ ಮಸೂದೆ ಇರಬಹುದು ಅಥವಾ ಬೇಡಿಕೆ ಇರಬಹುದು, ಪ್ರತಿಯೊಂದರ ಮೇಲೆ ಅವರು ಮಾತನಾಡದೆ ಯಾವ ಮಸೂದೆ ಕೂಡ ನೇರವಾಗಿ ಪಾಸ್ ಆಗುತ್ತಿರಲಿಲ್ಲ. ಅದು ಪರ ಇರಬಹುದು, ವಿರೋಧ ಇರಬಹುದು. ಸುಮ್ಮನೆ ಬಿಟ್ಟುಕೊಡತಕ್ಕ ಸ್ವಭಾವ ಅವರಲ್ಲಿ ಇರಲಿಲ್ಲ. ಮಾತನಾಡುವುದು ಬೇಡ, ಏನೂ ಇಲ್ಲವೆಂದರೂ ಕೊನೇಪಕ್ಷ ಪೈನಾನ್ಷಿಯಲ್ ಮೆಮೋರ್ಯಾಂಡಂ ಆದರೂ ಅವರು ನೋಡುತ್ತಿದ್ದರು ಅಥವಾ ಮಮಾದೆಯನ್ನು ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ಸದನದಲ್ಲಿ ಮಂಡನೆ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡುತ್ತಿದ್ದರು. ಅಂದರೆ ಇಷ್ಟು ಸೂಕ್ಷ್ಮವಾಗಿ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ನೋಡಿ ಅಭ್ಯಾಸ ಮಾಡಿಕೊಂಡು ಮಾತನಾಡುತ್ತಿದ್ದ ವ್ಯಕ್ತಿ ಅವರು. ಅವರಿಂದ ಯುವಕರು ಕಲಿಯತಕ್ಕದ್ದು ಬಹಳಷ್ಟು ಇದೆ. ಏಕೆಂದರೆ ಅವರು ಯಾವ ರೀತಿಯಾಗಿ ಸಂದರ್ಭ ಬಂದಾಗ ಮಾತನಾಡುತ್ತಿದ್ದರು ಅಥವಾ ಪ್ರಶ್ನೆಗಳನ್ನು ಎತ್ತುತ್ತಿದ್ದರು ಎನ್ನತಕ್ಕದ್ದರ ಬಗ್ಗೆ ಹೊಸ ಸದಸ್ಯರಿಗೆ ಅವರು ಮಾರ್ಗದರ್ಶನವಾಗಿದ್ದರು ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ನಾನು ಕೂಡ ಅವರ ಜೊತೆಯಲ್ಲಿ ಕೆಲಸಮಾಡಿದ್ದೇನೆ. ತದನಂತರ ಪುನಃ ಅವರು ನಮ್ಮ ಪಕ್ಷದ ಮತಿಯಿಂದ ಶಾಸಕರಾಗಿದ್ದಾಗಲೂ ಅವರ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಒದಗಿತ್ತು. ಯಾವುದೇ ಸಂದರ್ಭದಲ್ಲೂ ಕೂಡ ಅವರ ಸಂಪರ್ಕದಲ್ಲಿರತಕ್ಕ ವ್ಯಕ್ತಿಗಳಿಗೆ ಅವರು ಮಾರ್ಗದರ್ಶನ ಮಾಡದೆ ಇರುತ್ತಿರಲಿಲ್ಲ. ಯಾವ ರೀತಿಯಿಂದ ಒಬ್ಬ ಯುವಕನನ್ನು ಪ್ರೋತ್ಸಾಹ ಮಾಡಬೇಕೆಂಬುದರ ಬಗ್ಗೆ ಮನ ಬಿಚ್ಚಿ ಅವರು ಮಾತನಾಡಿ ಸಹಾಯ ಮಾಡತಕ್ಕ ವ್ಯಕ್ತಿಗಳಾಗಿದ್ದರು. ಅಂಥ

ವ್ಯಕ್ತಿ ಆಕಸ್ಮಿಕವಾಗಿ ನಮ್ಮಿಂದ ಆಗಲಿ ಹೋಗಿದ್ದಾರೆ. ಬಹುಶಃ ಅವರು ಚುನಾವಣಾ ಪ್ರಚಾರಕ್ಕೆ ಹೋದಾಗ ಹೃದಯಾಘಾತವಾಗಿ ಹಿಂದೂಪುರದಲ್ಲಿ ತೀರಿಕೊಂಡರು ಎಂಬ ವರದಿ ನನಗೆ ಬಂತು. ಈ ಸದನದ ಎತ್ತರವಾದ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇದರಿಂದಾಗಿ ಅವರ ಕುಟುಂಬಕ್ಕೆ ಅಷ್ಟೇ ಅಲ್ಲ ಇಡೀ ರಾಜ್ಯಕ್ಕೆ ಸಮಾಜಕ್ಕೆ ತುಂಬಲಾರದ ಹಾನಿಯಾಗಿದೆ. ಅದನ್ನು ಸಹಿಸತಕ್ಕ ಶಕ್ತಿಯನ್ನು ಅವರ ಕುಟುಂಬಕ್ಕೆ ಭಗವಂತ ಕೊಡಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

ಶ್ರೀಮಾನ್ ಶ್ರೀಕಾಂತ ಅಂಬಡಗಟ್ಟಿಯವರು ತಮಗೆ ಗೊತ್ತಿದ್ದ ಹಾಗೆ ಸುಮಾರು 46 ವರ್ಷ ವಯಸ್ಸಿನ ಯುವಕ. ಅವರಿಗೆ ಏನೇ ತೊಂದರೆಗಳು ಇದ್ದರೂ ಕೂಡ ಅರುಗಳನ್ನು ನಿವಾರಣೆ ಮಾಡಬೇಕೆಂದು ತಮ್ಮ ಛೇಂಬರ್‌ಗೆ ಅನೇಕ ಸಾರಿ ಬರುತ್ತಿದ್ದರು. ಆಕಸ್ಮಿಕವಾದ ಈ ಒಂದು ರಸ್ತೆಯ ಅಪಘಾತದಲ್ಲಿ ಅಂಥ ಒಬ್ಬ ಯುವಕ ತನ್ನ ಜೀವವನ್ನು ಕಳೆದುಕೊಳ್ಳತಕ್ಕದ್ದು ಆಯಿತು. ಈ ಸದನದಲ್ಲಿ ಸುಮಾರು 1980ರಿಂದ ನನಗೆ ಅವರು ಪರಿಚಯ. 1983ರಲ್ಲಿ ಅವರು ಮುನಿಸಿಪಲ್ ಕೌನ್ಸಿಲರ್‌ರ ಆಗಿದ್ದರು ಮತ್ತು ಮುನಿಸಿಪಲ್ ಪ್ರೆಸಿಡೆಂಟರು ಆಗಿದ್ದರು. ಅಲ್ಲದೆ, ರೈತರನ್ನು ಸಂಘಟನೆ ಮಾಡಿ ಸಂಘವನ್ನು ಬೆಳೆಸಿ, ಅಲ್ಲಿ ರೈತಸಂಘದ ಬೆಳವಣಿಗೆ ಏನಿತ್ತು ಅದರ ಸರಿಸಮಾನವಾಗಿ ಹೋರಾಟ ಮಾಡಿ ಗೆದ್ದುಬರಬೇಕೆಂದರೆ ಎಷ್ಟು ಕಷ್ಟ ಇತ್ತು, ಆ ಯುವಕ ಎಷ್ಟು ಕೆಲಸ ಮಾಡಿರಬಹುದೆಂಬುದನ್ನು ನಾವು ಇಲ್ಲಿ ನೆನಸಿಕೊಳ್ಳಬೇಕಾಗುತ್ತದೆ. ಶ್ರೀಮಾನ್ ಬಾಬುಗೌಡ ಪಾಟೀಲರು ಅದೇ ಕ್ಷೇತ್ರದಿಂದ ಬಂದಿದ್ದರು. ಆದಾದಮೇಲೆ ಪ್ರೊ।। ನಂಜುಂಡಸ್ವಾಮಿಯವರು ಬಂದಿದ್ದರು. ಈ ರೈತಸಂಘದ ಬೆಳವಣಿಗೆ ಸಂಘಟನೆಯು ಮುಂದೆ ಎದುರು ನಿಂತು ಅವರು ಅದೇ ರೀತಿಕೆಲಸ ಮಾಡಿದ್ದಕ್ಕಾಗಿ ಜನರು ಆ ಯುವಕನನ್ನು ಮೆಚ್ಚಿ ಆರಿಸಿದ್ದರು. ಅಂಥ ಯುವಕನನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ನಾನು ವೈಯಕ್ತಿಕವಾಗಿ ಅವರ ಊರಿಗೆ ಹೋಗಿ ಅವರ ಕುಟುಂಬದವರಿಗೆ ಸಾಂತ್ವನ ಕೊಡತಕ್ಕ ಪ್ರಯತ್ನ ಮಾಡಿದ್ದೇನೆ. ಆದರೂ ಕೂಡ ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ ನಾವು ಅವರನ್ನು ಕಳೆದುಕೊಂಡಿದ್ದಕ್ಕಾಗಿ ನಮ್ಮೆಲ್ಲರಿಗೆ ಇವತ್ತು ಅಪರಾದವಾದ ನಷ್ಟ ಉಂಟಾಗಿದೆ. ಅದೇ ರೀತಿ ಶ್ರೀ ಹಾಲಪ್ಪನವರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರು 1972 ರಲ್ಲಿ ನಮ್ಮ ಜೊತೆಯಲ್ಲಿದ್ದರು 1978ರಲ್ಲೂ ಕೂಡ ಇದ್ದರೆಂದು ಕಾಣುತ್ತದೆ. ಬಹುಶಃ 1972ರಲ್ಲಿ ನಮ್ಮ ಜೊತೆಯಲ್ಲಿದ್ದಾಗ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸದಸ್ಯರಾಗಿದ್ದರು. ತದನಂತರ ಶ್ರೀಮಾನ್ ವೀರಪ್ಪ ಮೊಯಿಲಿಯವರ ಸಚಿವ ಸಂಪುಟದಲ್ಲಿ ಪರಿಸರ ಮಂತ್ರಿಗಳಾಗಿ ತನ್ನದೇ ಆದ ರೀತಿನೀತಿಗಳಲ್ಲಿ ಕೆಲಸ ಮಾಡತಕ್ಕ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು. ಅವರು

ಬಹಳ ಪ್ರಾಮಾಣಿಕ ವ್ಯಕ್ತಿ ಮತ್ತು ಒಳ್ಳೆಯ ವಕೀಲರು ಮತ್ತು ಅಷ್ಟೆ ಸರಳ. ಅವರು ನಾನು ಶಾಸಕನಿದ್ದೇನೆಂದು ಹೇಳಿಕೊಳ್ಳುತ್ತಿರಲಿಲ್ಲ. ಯಾರೂ ಕೂಡ ಅವರನ್ನು ಶಾಸಕರು ಎಂದು ಗುರುತು ಹಿಡಿಯುತ್ತಿರಲಿಲ್ಲ. ಅಷ್ಟೊಂದು ಸರಳವಾದ ವ್ಯಕ್ತಿಯಾಗಿದ್ದರು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಹೀಗೇ ವಿಟಲ ಶೆಟ್ಟಿಯವರು, ಬೋಜರಾಜ್ ಅವರು ನನ್ನ ತಾಲ್ಲೂಕಿನಿಂದ 1962 ರಲ್ಲಿ ಆರಿಸಿಬಂದಿದ್ದರು. ಅವರು ಸ್ವತಂತ್ರ ಅಭ್ಯರ್ಥಿಯಾಗಿದ್ದರು. ತಾರಾನಾಡ ವಿದ್ಯಾಸಂಸ್ಥೆ ಎಂದು ಏನಿದೆ ಆ ತಾರಾನಾಥ ಅವರದೇ ಆದ ವಿಶೇಷ ತತ್ವಜ್ಞಾನ ಆ ತತ್ವಕ್ಕೆ ಹೆಚ್ಚಿನ ಚೆಂಬಲ ಮತ್ತುಸಹಾಯ ಸಹಕಾರವನ್ನು ಕೊಟ್ಟುಕೊಂಡು ಅವರ ಶಿಷ್ಯರಾಗಿ ಇವರೂ ಕೂಡ ಬೆಳೆದುಕೊಂಡು ಬಂದಿದ್ದರು. ಅದಕ್ಕಾಗಿ ಶ್ರೀಭೋಜರಾಜ್ ಅವರು ಬಿಜಾಪುರ ಜಿಲ್ಲೆಯಿಂದ ಬಂದರೂ ಕೂಡ ಯಾದ್ಗಿರಿಯಲ್ಲಿ ಸ್ವತಂತ್ರವಾಗಿ ಆಯ್ಕೆ ಆಗಬೇಕಾದರೆ ಅವರ ವ್ಯಕ್ತಿತ್ವ ಮತ್ತು ಅವರ ಒಂದು ಜನಪ್ರಿಯತೆ ಅಲ್ಲಿ ದಾಖಲಾಗಿರತಕ್ಕದ್ದು ಕಾರಣ ಎಂಬ ಮಾತನ್ನು ನೆನಸಿಕೊಳ್ಳಬೇಕಾಗುತ್ತದೆ. ಅದೇ ರೀತಿ, ಶ್ರೀ ಮಂಜಯ್ಯಶೆಟ್ಟಿಯವರು ಮತ್ತು ಶ್ರೀ ಪಿ. ವಿ. ಐತಾಳ್ ಅವರು ಹಾಗೂ ಈಗತಾನೇ ಹೇಳಿದ ಹಾಗೆ ಸ್ರೀಮತಿ ಮಂಗಳ ಅವರು. ಸದಾಶಿವನಗರದಲ್ಲಿ ಅವರ ಮನೆ ಇಲ್ಲದಿದ್ದರೂ ಕೂಡ, ವೈಯಕ್ತಿಕವಾಗಿ ನಾನು ಅವರನ್ನು ಬೇಟಿಯಾದಾಗ ಮಾತುಕತೆ ಆಡತಕ್ಕದ್ದು ಚರ್ಚೆ ಮಾಡತಕ್ಕದ್ದು, ನಾನು ಶಿಕ್ಷಣ ಸಚಿವನಾಗಿದ್ದಾಗ ನನಗೆ ಆ ಒಂದು ಅವಕಾಶ ಸಿಕ್ಕಿತ್ತು. ಅಂಥ ವ್ಯಕ್ತಿ ಶ್ರೀಮತಿ ಮಂಗಳ ಅರರು ಆಗಲಿದ್ದಕ್ಕಾಗಿ ನಿಜವಾಗಿ ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಖ್ಯಾತ ಲೇಖಕಿಯನ್ನು ಕಳೆದುಕೊಂಡಿದ್ದೇವೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನೊಂದು ಆಚಾರ್ಯ ತುಳಸಿ ಅವರು ಮಹಾವೀರರ ತತ್ವಗಳನ್ನು ಪರಿಪಾಲನೆ ಮಾಡತಕ್ಕದ್ದು ಆಚರಣೆಯಲ್ಲಿ ತರತಕ್ಕದ್ದು ಅವರ ಪ್ರಮುಖ ಗುರಿಯಾಗಿತ್ತು. ಅದೇ ದಾರಿ ತುಳಿಯಬೇಕು, ಅದರಿಂದ ರಾಜ್ಯಕ್ಕೆ ಮುಕ್ತಿ ಇದೆ ಎಂಬ ನಂಬಿಕೆ ಇಟ್ಟುಕೊಂಡು ಅವರು ಪ್ರತಿಯೊಂದು ಸವಾಲನ್ನೂ ಎದುರಿಸುತ್ತಿದ್ದರು. ಅಂತಹ ಮಹನೀಯರನ್ನು ನಾವು 23-6-97ರಂದು ಕಳೆದುಕೊಂಡಿದ್ದೇವೆ. ಕರ್ನಾಟಕ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀ ಎನ್. ಕೆ. ಪ್ರಭಾಕರ ರಾವ್‌ರವರ ನಿಧನರಾಗಿರುವ ಬಗ್ಗೆ ಅವರ ಹೆಸರನ್ನೂ ಸಹ ಸಂತಾಪ ಸೂಚಕ ನಿರ್ಣಯದಲ್ಲಿ ಸೇರಿಸುತ್ತೀರಾ ಹೇಗೆ? ಏಕೆಂದರೆ, ನಮಗೆ ಸಂಬಂಧಪಟ್ಟಂತಹ ಬ್ಯೂರೋಕ್ರಾಟ್ಸ್ ಹೆಡ್ಸ್ ಆದಮೇಲೆ ಬಹುಶಃ ಹಿಂದೆ ಕೂಡ ಇಂತಹ ಉದಾಹರಣೆ ಇದ್ದರೆ, ಅದನ್ನು ಗಮನಕ್ಕೆ ತೆಗೆದುಕೊಂಡು ಅವರ ಕುಟುಂಬದವರಿಗೂ ಸಹ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸತಕ್ಕಂಥದ್ದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳಿ, ಈ ಮೃತರ ಕುಟುಂಬಕ್ಕೆ

ಸಮಾಧಾನವಾಗತಕ್ಕ ರೀತಿಯಲ್ಲಿ ಮತ್ತು ಅವರಿಗೆ ಧೈರ್ಯವನ್ನು ತಂದುಕೊಡತಕ್ಕದ್ದಾಗಲೆಂಬ ಮಾತನ್ನು ಹೇಳಿ, ತಾವು ತಂದಿರುವಂತಹ ಈ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಎಲ್ಲ ಜನಾಂಗದ ಬಗ್ಗೆ ವಿಶೇಷವಾಗಿ ದಲಿತ ಜನಾಂಗದ ಬಗ್ಗೆ ಕಳಕಳಿ ಇದ್ದಂಥ ಒಬ್ಬ ರಾಜಕೀಯ ಮುತ್ಸದ್ದಿಯಾಗಿದ್ದ ಸನ್ಮಾನ್ಯ ಶ್ರೀ ವೈ. ರಾಮಕೃಷ್ಣರವರನ್ನು ಕಳೆದುಕೊಂಡು ನಾವು ತುಂಬಾ ಬಡವಾಗಿದ್ದೇವೆ. ಹಿಂದಿನ ಬಜೆಟ್ ಅಧಿವೇಶನದಲ್ಲಿ ನನ್ನ ಪಕ್ಕದಲ್ಲಿ ಕುಳಿತುಕೊಂಡು ಪ್ರತಿಕ್ಷಣವೂ ನನಗೆ ಮಾರ್ಗದರ್ಶನ ಮಾಡುತ್ತಿದ್ದ ಶ್ರೀ ವೈ. ರಾಮಕೃಷ್ಣರವರು ಇವತ್ತು ಇಲ್ಲ ಎನ್ನುವಂಥದ್ದನ್ನು ಊಹೆ ಮಾಡಿಕೊಳ್ಳುವುದಕ್ಕೂ ನನ್ನಿಂದ ಸಾಧ್ಯವಾಗುತ್ತಿಲ್ಲ. ಮೊಳಕಾಲ್ಮೂರು ಉಪ ಚುನಾವಣೆಯಲ್ಲಿ ಮೇ 25ನೇ ತಾರೀಖು ನಮ್ಮ ಜೊತೆಯಲ್ಲಿ ಪಾದಯಾತ್ರೆ ಮಾಡಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ರಾತ್ರಿ ಆಂಧ್ರಪ್ರದೇಶದ ಗೆಸ್ಟ್‌ಹೌಸ್‌ಗೆ ಅಂದರೆ ರಾಯದುರ್ಗಕ್ಕೆ ಹೋಗಿ ಸುಮಾರು 11-45 12-00 ಗಂಟೆಯಲ್ಲಿ ಇದ್ದಕ್ಕಿದ್ದ ಹಾಗೆ ಹಾರ್ಟ್ ಅಟ್ಯಾಕಾಗಿ ಅವರು ತೀರಿಕೊಂಡರು. ಈ ಸುದ್ದಿ ಗೊತ್ತಾದ ತಕ್ಷಣ ನಾನು ಮತ್ತು ನಮ್ಮ ಪಕ್ಷದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಕೆ. ಎಸ್. ಈಶ್ವರಪ್ಪರವರು ಅಲ್ಲಿಗೆ ಹೋಗಿ, ಅವರ ಪಾರ್ಥಿವ ಶರೀರವನ್ನು ಬೆಂಗಳೂರಿಗೆ ನಮ್ಮ ಜೊತೆಯಲ್ಲೇ ತರಬೇಕೆಂದು ಪ್ರಯತ್ನ ಮಾಡಿದ್ದೆವು. ಶ್ರೀ ವೈ. ರಾಮಕೃಷ್ಣರವರು ತಮ್ಮ ಕೊನೆಯುಸಿರಿರುವವರೆಗೂ ಪಕ್ಷದ ಬಗ್ಗೆ ನಿಷ್ಠೆ ಹಾಗೂ ಸಿದ್ಧಾಂತಕ್ಕೆ ಬದ್ಧರಾಗಿದ್ದರು. ತಮ್ಮ ಕೊನೆ ಘಳಿಗೆವರೆಗೂ ತಮ್ಮದೇ ಆದಂತಹ ಸಂಘಟನೆಯ ದೃಷ್ಟಿಯಿಂದ ನಮ್ಮ ಜೊತೆಗೂಡಿ ಕೆಲಸ ಮಾಡಿದಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶಾಸನ ಸಭೆಯಲ್ಲಿ ದಲಿತ ಸಮಾಜಕ್ಕೆ ಸಂಬಂಧಿಸಿದಂತೆ ಯಾವುದೇ ವಿಷಯ ಬಂದರೂ ಸಹ ಅಂಕಿ-ಅಂಶಗಳನ್ನೊಳಗೊಂಡಂತೆ ತುಂಬಾ ಪ್ರಭಾವಿತರಾಗಿ ಮಾತನಾಡುತ್ತಿದ್ದಂಥ ಒಬ್ಬ ಹಿರಿಯ ಮುತ್ಸದ್ದಿ ಅವರಾಗಿದ್ದರು ವಿಶೇಷವಾಗಿ, ಹೊಸದಾಗಿ ಆಯ್ಕೆಯಾಗಿ ಬಂದಂಥ ಶಾಸಕರು ತಿಳಿದುಕೊಳ್ಳಬೇಕಾದ ಸಂಗತಿ ಏನೆಂದರೆ, ಒಂದು ಸಾರಿ ಸದನದೊಳಗೆ ಬಂದರೆಸದನದ ಕಾರ್ಯಕಲಾಪಗಳು ಮುಗಿಯುವವರೆಗೂ ಸಹ ಒಂದು ಕ್ಷಣ ಕೂಡ ಹೊರಗಡೆ ಹೋಗದೆ ಪ್ರತಿಕ್ಷಣವೂ ಎಲ್ಲದರ ಕಡೆಗೂ ಗಮನಕೊಟ್ಟು ಅದನ್ನು ನೋಟ್ ಮಾಡಿಕೊಂಡು ನಮಗೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು. ಸನ್ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ, ಶ್ರೀ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ

ಕಾಲದಲ್ಲಿ ಶ್ರೀ ಗುಂಡೂರಾವ್‌ರವರ ಕಾಲದಲ್ಲಿಯೂ ಸಹ ಅವರು ಸಚಿವರಾಗಿದ್ದರು. 1994 ರಲ್ಲಿ ಬಿ.ಜೆ.ಪಿ. ಅಭ್ಯರ್ಥಿಯಾಗಿ ಅನೇಕಲ್‌ನಿಂದ ಆಯ್ಕೆಯಾಗಿ ನಮಗೆ ಮಾರ್ಗದರ್ಶನವನ್ನು ಮಾಡಿಕೊಂಡು ಬಂದರು. ಅನೇಕ ಸಂಘ-ಸಂಸ್ಥೆಗಳು ಅಂದರೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರಾಗಿ, ರಾಜ್ಯ ಕ್ಷಯ ರೋಗ ನಿವಾರಣಾ ಸಂಸ್ಥೆಯ ಅಧ್ಯಕ್ಷರಾಗಿ, ಬಾಪೂಜಿ ವಿದ್ಯಸಂಸ್ಥೆ, ಮಂಡಗದ್ದೆ ಇದರ ಅಧ್ಯಕ್ಷರಾಗಿ, ಆದಿಜಾಂಬವ ಟ್ರಸ್ಟ್‌ನ ಅಧ್ಯಕ್ಷರಾಗಿಯೂ ಕೆಲಸ ಮಾಡಿದಂತಹ ಒಬ್ಬ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ತಮ್ಮ ಜೀವನಪೂರ್ಣ ತಮ್ಮನ್ನು ತಾವು ಸಮಾಜದ ಕೆಲಸಕ್ಕೆ ತೊಡಗಿಸಿಕೊಂಡು, ಆದರ್ಶ ವ್ಯಕ್ತಿಯಾಗಿ ಈ ನಾಡಿಗೆ ಮಾರ್ಗದರ್ಶನವನ್ನು ಮಾಡಿದಂತಹ ಒಬ್ಬ ಹಿರಿಯ ವ್ಯಕ್ತಿಯ ಮತ್ತು ಮುತ್ಸದ್ದಿಯ ಬಗ್ಗೆ ಅಧ್ಯಕ್ಷರೆ ತಾವು ಏನಾದರೊಂದು ಸರಿಯಾದ ಪುಸ್ತಕವನ್ನು ಸಾಧ್ಯವಾದರೆ ಹೊರ ತರಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ನಾನು ವಿನಂತಿಸಿ, ಶ್ರೀ ವೈ. ರಾಮಕೃಷ್ಣರವರ ಜೊತೆ ಶ್ರೀ ಶ್ರೀಕಾಂತ ಅಂಬಡಗಟ್ಟಿ, ಇವರು ಯುವಕರಾಗಿ ಇಲ್ಲಿ ಆಯ್ಕೆಯಾಗಿ ಬಂದ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಇದ್ದಂತಹವರು ಆಕಸ್ಮಿಕವಾಗಿ ಆಕಾಲಿಕ ಮರಣಕ್ಕೆ ತುತ್ತಾದರು. ಅದೇ ರೀತಿ, ಮಾಜಿ ಸಚಿವರು ಮತ್ತು ವಕೀಲರಾಗಿದ್ದ ಶ್ರೀ ಎನ್. ಜಿ. ಹಾಲಪ್ಪನವರು ನಮಗೆ ತುಂಬಾ ಬೇಕಾದಂತಹ ಹಿರಿಯ ವ್ಯಕ್ತಿ. ಅವರು ಶಿವಮೊಗ್ಗದಲ್ಲಿ ದೈವಾಧೀನರಾದಂತಹ ಸಂದರ್ಭದಲ್ಲಿ ಅವರ ಪಾರ್ಥಿವ ಶರೀರಕ್ಕೆ ಶ್ರದ್ಧಾಂಜಲಿಯನ್ನುರ್ಪಿಸುವಂತಹ ಅವಕಾಶ ನನಗೆ ಸಿಕ್ಕಿತ್ತು. ಅದೇ ರೀತಿಯಾಗಿ, ಶ್ರೀ ವಿಠಲದಾಸ ಶೆಟ್ಟಿ, ಶ್ರೀ ವೈ. ಮಂಜಯ್ಯ ಶೆಟ್ಟಿ, ಡಾ|| ಭೋಜರಾಜ, ಶ್ರೀ ಪಿ. ವಿ. ಐತಾಳ್ ಹಾಗೂ ಖ್ಯಾತ ಲೇಖಕಿಯಾಗಿದ್ದ ಶ್ರೀಮತಿ ಚಿ. ನ. ಮಂಗಳಾ ಇವರುಗಳಿಲ್ಲರೂ ನಿಧನ ಹೊಂದಿದ್ದಾರೆ. ಇಡೀ ದೇಶಕ್ಕೆ ಮಾರ್ಗದರ್ಶನವನ್ನು ಮಾಡುತ್ತಿದ್ದಂತಹ ಪೂಜ್ಯರಾದ ಆಚಾರ್ಯ ಶ್ರೀ ರತುಳಸಿರವರನ್ನು ನಾವಿಂದು ಕಳೆದು ಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಶ್ರೀ ವೈ. ರಾಮಕೃಷ್ಣರವರ ಕುಟುಂಬಕ್ಕೆ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ ತಾವು ಅನೇಕ ಗಣ್ಯ ಮಹನೀಯರ ನಿಧನದ ಮಂಡಿಸಿರತಕ್ಕ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಶ್ರೀ ವೈ. ರಾಮಕೃಷ್ಣರವರು ನಮ್ಮ ಪಕ್ಕದಲ್ಲೇ ಇಲ್ಲೇ ಕುಳಿತುಕೊಳ್ಳುತ್ತಿದ್ದರು. ಅವರು ಎಂತಹ ವ್ಯಕ್ತಿತ್ವವುಳ್ಳವರೆಂದರೆ, ಬಹುಶಃ ಅಪಾರವಾದಂತಹ

ತಿಳುವಳಿಕೆಯುಳ್ಳವರೆಂದು ಹೇಳಬಹುದು. ಅದಕ್ಕೆ ಕಾರಣ, ಅವರು ಅನೇಕ ವರ್ಷಗಳ ಕಾಲ ಈ ಶಾಸನ ಸಭೆಯಲ್ಲಿ ಕೆಲಸ ಮಾಡಿರುವುದು. ನಮ್ಮ ಈಗಿನ ಮಾನ್ಯ ಮುಖ್ಯಮಂತ್ರಿಗಳು, ಶ್ರೀ ವೈ. ರಾಮಕೃಷ್ಣರವರು ಚೆನ್ನಾಗಿ ಮಾತನಾಡುತ್ತಾರೆ, ಅವರು ಯಾವುದೇ ವಿಷಯದ ಬಗ್ಗೆ ಮಾತನಾಡಬೇಕಾದರೂ ಸ್ಪಷ್ಟವಾಗಿ ಅಂಕಿ-ಅಂಶಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆಂದು ಯಾವಾಗಲೂ ಹೇಳುತ್ತಿದ್ದರು. ಅಂದರೆ, ಅವಾಗ ಅವರು ಬಹಳ ಖುಷಿಯಾಗುತ್ತಿದ್ದರು. ನಿಜವಾಗಿಯೂ ನಾನು ಇಲ್ಲಿ ಬಂದು ಸಾರ್ಥಕವಾಯಿತು, ನನ್ನ ಬಗ್ಗೆ ಅಪಾರವಾದಂತಹ ಒಳ್ಳೆಯ ಮಾತುಗಳನ್ನು ಹೇಳತಕ್ಕ ವಿಚಾರದಲ್ಲಿ ಅಲ್ಲಿ ಕುಳಿತುಕೊಂಡು ಮಾತನಾಡುವಾಗ ಅವರು ಪ್ರಸನ್ನರಾಗುತ್ತಿದ್ದರು. ನಾವು ಆವಾಗ ಅವರನ್ನು ಚುಡಾಯಿಸುತ್ತಿದ್ದೆವು, ಮಾನ್ಯ ಮುಖ್ಯಮಂತ್ರಿಗಳು ಕೇವಲ ನಿಮ್ಮೊಬ್ಬರ ಬಗ್ಗೆಯೇ ಹೇಳುತ್ತಿದ್ದಾರೆ, ಬೇರೆ ಯಾರ ಬಗ್ಗೆಯೂ ಹೇಳುತ್ತಿಲ್ಲ ಎಂದು. ನಾನು ಅವರ ಜೊತೆಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ಕಾಲದಿಂದಲೂ ಮತ್ತು ಶ್ರೀ ಬೀರೇಂದ್ರ ಪಾಟೀಲರ ಕಾಲದಲ್ಲೂ ಶಾಸಕನಾಗಿದ್ದೆ. ಹೀಗೆ ನನ್ನ ಜೊತೆಯಲ್ಲಿ ಅವರು ಇದ್ದರು. ಅವರು ನಮ್ಮ ತಾಲ್ಲೂಕಿನಲ್ಲಿ ಮದುವೆಯಾಗಿದ್ದವರು. ಒಬ್ಬ ಒಳ್ಳೆಯ ಮತ್ತು ಅಪಾರವಾದಂತಹ ತಿಲುವಳಿಕೆ ಇರತಕ್ಕ ವ್ಯಕ್ತಿ. ನಾನು ಈ ಹಿಂದೆ ಶಾಸನ ಸಬೆಯಲ್ಲೂ ಹೇಳಿದ ಮಾತನ್ನು ತಮಗೆ ಜ್ಞಾಪಿಸುತ್ತೇನೆ ಏನೆಂದರೆ, ಶಾಸಕರು, ಮಾಡಿ ಮಂತ್ರಿಗಳು ಅಥವಾ ಮಂತ್ರಿಗಳಾಗಿದ್ದವರು ಯಾರು ರಾಜಕಾರಣಿಗಳು ಈ ರಾಜ್ಯಕ್ಕೆ, ನಾಡಿಗೆ ಬೇರೆ ಬೇರೆ ದೃಷ್ಟಿಯಲ್ಲಿ ತ್ಯಾಗ ಮಾಡಿ ದುಡಿದಿದ್ದಾರೆ, ಅವರ ಬಗ್ಗೆ ಶತ ಶತಮಾನಗಳ ಕಾಲ ಉಳಿಯತಕ್ಕ ಯಾವುದಾದರೊಂದು ಸ್ಮರಣೆಗೆ ದಾರಿಯನ್ನು ಮಾಡಬೇಕಾದುದು ನಮ್ಮ ಕರ್ತವ್ಯ. ನಾವು ಸಂತಾಪ ಸೂಚಕ ಸಭೆ ಮಾಡುತ್ತೇವೆ, ಸಂತಾಪ ಸೂಚಕ ನಿರ್ಣಯವನ್ನು ಅವರ ಮನೆಗೆ ಕಳುಹಿಸಿಕೊಡುತ್ತೇವೆ. ಇದೇ ರೀತಿ, ನಾವು ನಿಧನರಾದವರಿಗೆ ಮಾಡತಕ್ಕಂಥಾದ್ದು. ಈ ಶಾಸನ ಸಭೆಯಲ್ಲೇ ಇದ್ದು, ಕೆಲಸ ಮಾಡಿ ರಾಜ್ಯಕ್ಕೆ ಅಪಾರವಾದಂತಹ ಸೇವೆ ಮಾಡಿರತಕ್ಕ ಮಹನೀಯರುಗಳ ಬಗ್ಗೆ ಕೊನೆಗೆ ಇತಿಹಾಸದಲ್ಲಿ ಉಳಿಯುವಂತಹ ಏನಾದರೂ ಒಂದು ಮಾಡಬೇಕು. ಕೊನೆಗೆ ಅವರಿಗೆ ಭಾರೀ ಪ್ರಮಾಣದಲ್ಲಿ ಮಾಡದೇ ಇದ್ದರೂ ಸಣ್ಣ ಪ್ರಮಾಣದಲ್ಲಾದರೂ ಮಾಡಬೇಕು. ಇವತ್ತು ಯಾರು ಕೆಲಸಕ್ಕೆ ಬಾರದವರಿಗೆ ಸ್ಮಾರಕ, ರಾಜಕಾರಣಿ ಎನ್ನತಕ್ಕಂಥದ್ದರ ಬಗ್ಗೆ ಒಂದು ರೀತಿ ಮೂಗುಮುರಿಯುವ ಪರಿಸ್ಥಿತಿ ನಿರ್ಮಾಮವಾಗಿದೆ. ಇಂತಹ ಸಂದರ್ಭದಲ್ಲಿ ರಾಜಕಾರಣಿ ಮಾಡುವಂತಹ ತ್ಯಾಗವನ್ನು ಮತ್ತು ಹೋರಾಟವನ್ನು ಗುರುತಿಸತಕ್ಕ ಒಂದು ಪ್ರಾಮಾಣಿಕ ಚಿಂತನೆ ಇವತ್ತು ಆಗಬೇಕಾಗಿದೆ. ಆದ್ದರಿಂದ, ಈ ಚಿಂತನೆಗೆ ಮಾರ್ಗದರ್ಶನ ಮಾಡುವುದಕ್ಕೆ ತಮಗೆ ಸಾಧ್ಯ ಎನ್ನತಕ್ಕ ಮಾತನ್ನು

ನಾನು ಟೌನ್‌ಹಾಲ್‌ನಲ್ಲಿ ಒಂದು ಸಭೆ ಮಾಡಿದಾಗ ಹೇಳಿದ್ದೆ. ಇವತ್ತು ತಾವು, ಮುಖ್ಯಮಂತ್ರಿಗಳು ಎಲ್ಲರನ್ನು ಕರೆದು ಒಂದು ಚಿಂತೆ ಮಾಡಿ ಇಂತಹ ವ್ಯಕ್ತಿಗಳು ನಿಧನರಾದಾಗ ನಿರಂತರವಾಗಿ ಶತ ಶತಮಾನಗಳ ಕಾಲ ಉಳಿಯುವಂತಹ ಒಂದು ಪ್ರಾಮಾಣಿಕವಾದಂತಹ ಸ್ಮಾರಕಕ್ಕೆ ಏನು ಬೇಕು ಅನ್ನುವುದರ ಬಗ್ಗೆ ಒಂದು ಮಾಡತಕ್ಕಂಥಾದ್ದು ಅತ್ಯಂತ ಅವಶ್ಯಕ ಮತ್ತು ಅದು ಬಹಳ ಪ್ರಾಮುಖ್ಯವಾದುದು. ಅವರ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಹತ್ತಾರು ವರ್ಷಗಳ ಕಾಲ ಅವರು ದುಡಿದಿದ್ದಾರೆ. ಇವತ್ತು ಅವರು ನಿಧನ ಹೊಂದಿದ್ದಾರೆ. ಇನ್ನೊಂದು ತಿಂಗಳು ಅಥವಾ ಒಂದೂವರೆ ತಿಂಗಳು ಆದ ತಕ್ಷಣ ನಾವು ಅವರನ್ನು ಮರೆಯುತ್ತೇವೆ. ಇದು ಪರಿಸ್ಥಿತಿ ಬಂದಿರತಕ್ಕದ್ದು. ಆದರೆ, ಮುಂದಿನ ಪೀಳಿಗೆಯವರು ಇವರು ಶಾಸಕರಾಗಿದ್ದರು, ಇವರು ಹೋರಾಟ ಮಾಡಿದ್ದಾರೆ, ಕ್ಷೇತ್ರದಲ್ಲಿ ದುಡಿದಿದ್ದಾರೆ ಎಂದು ಇದೆಲ್ಲವನ್ನೂ ವಿಚಾರಮಾಡತಕ್ಕ ಒಂದು ಶಕ್ತಿ ಚಿಂತನೆ ಇವತ್ತು ನಮಗೆ ಆಗಬೇಕಾಗಿದೆ. ಎಷ್ಟೋ ಬಾರಿ ನನಗನ್ನಿಸುತ್ತದೆ, ಎಷ್ಟೋ ಜನ ಈ ಶಾಸನ ಸಭೆಯಲ್ಲಿದ್ದಂಥವರ ಬಗ್ಗೆ ನಮ್ಮ ಲೈಬ್ರರಿಯಲ್ಲಿ ನೋಡಿದರೆ, ಅವರ ಹೆಸರುಗಳೇ ಇಲ್ಲ. ಅವರು ಭಾಷಣ ಮಾಡಿದ್ದೊಂದನ್ನು ಬಿಟ್ಟರೆ, ಅವರ ಇತಿಹಾಸವೇನು, ಯಾವ ರೀತಿ ಇದೆ, ನಾಳೆ ಯಾರಾದರೂ ನಿಧನರಾದರೆ, ತಕ್ಷಣ ಅವರ ಬಗ್ಗೆ ಇತಿಹಾಸ ಏನು ಎಂದು ಕೇಳತಕ್ಕಂಥದ್ದಕ್ಕೆ ನಮ್ಮಲ್ಲಿ ಇವತ್ತು ಅಂತಹ ಲೈಬ್ರರಿ ಯಾವುದೂ ಇಲ್ಲ. ಅಂಥ ಒಂದು ಪುಸ್ತಕ ಭಂಡಾರ ಯಾವುದೂ ಇವತ್ತಿಲ್ಲ. ಅಂಥದ್ದರ ಬಗ್ಗೆ ಪುಸ್ತಕ ತಯಾರಾಗುತ್ತಿಲ್ಲ. ಅದಕ್ಕೆ ತಮ್ಮ ನೇತೃತ್ವದಲ್ಲಿ ಇಂಥ ಒಂದು ಪ್ರಾಮುಖ್ಯತೆ ಬರತಕ್ಕಂಥ ಒಂದು ವ್ಯವಸ್ಥೆ ಶಾಸಕಾಂಗದಲ್ಲಿ ಆಗಬೇಕು ಎನ್ನತಕ್ಕಂಥದ್ದು. ನಾನು ತೀರಾ ಮುಂದಕ್ಕೆ ಹೋಗಿ ಅವರ ಕ್ಷೇತ್ರದಲ್ಲಿ, ಎಲ್ಲಿ ಅವರು ಮಾಡಿದ್ದಾರೆ ಎಲ್ಲಿ ಅವರು ಸೇವೆ ಮಾಡಿದ್ದಾರೆ ಆ ಕ್ಷೇತ್ರದಲ್ಲಿ ಒಂದು ಪ್ರತಿಮೆ ಸ್ಥಾಪಿಸಿವೆಂದು ಹೇಳುತ್ತೇನೆ ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಏಕೆಂದರೆ ಅದು ಆಗಬೇಕು. ಅದು ಅತ್ಯಂತ ಪ್ರಾಮುಖ್ಯ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಅವರ ಕ್ಷೇತ್ರದಲ್ಲಿ ಅವರು ದುಡಿದಿದ್ದಾರೆ. ದುಡಿದಿರತಕ್ಕ ವ್ಯಕ್ತಿಯನ್ನು ನಾವು ತಕ್ಷಣ ಮರೆಯುತ್ತೇವೆ. ಹೋಬಳಿಯಲ್ಲಿ ಹಾಕಿ. ಬಂದು ಹಳ್ಳಿಯಲ್ಲಿ ಹಾಕಿ. ಕೊನೆಗೆ ಈ ವ್ಯಕ್ತಿ ನಮ್ಮ ರಾಜ್ಯದಲ್ಲಿ ನಮ್ಮ ತಾಲ್ಲೂಕಿನಲ್ಲಿ ನಮ್ಮ ಹೋಬಳಿಯಲ್ಲಿ ದುಡಿದಿದ್ದಾರೆ ಎಂದು ಹೆಸರು ಬರುವುದಕ್ಕಾದರೂ ಪ್ರಾರಂಭವಾಗಬೇಕಾದ್ದು ಕರ್ತವ್ಯ. ಆ ಪ್ರಾರಂಭ ವೈ. ರಾಮಕೃಷ್ಣ ಅವರಿಂದ ಆಗಲಿ ಎನ್ನುವ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಅವರು ಬಹಳ ವರ್ಷಗಳಿಂದ ಈ ಶಾಸನಸಭೆಯ ಒಬ್ಬ ಹಿರಿಯ ವ್ಯಕ್ತಿ. ಯಜಮಾನಿಕೆ ಇದ್ದಂಥ ಒಬ್ಬ ವ್ಯಕ್ತಿ. ಇವರ ನಿಧನದಿಂದ ಕರ್ನಾಟಕ ರಾಜ್ಯಕ್ಕೆ ಮತ್ತು ಈ ಶಾಸನಸಭೆಗೆ ಅಪಾರವಾದ

ನಷ್ಟವಾಗಿದೆ ಎಂಬ ಮಾತನ್ನು ಸಂಧರ್ಭದಲ್ಲಿ ತಮಗೆ ಹೇಳಬಯಸುತ್ತೇನೆ ಇನ್ನೂ ಶ್ರೀ ಅವರು ಎಷ್ಟು ಬೇಗ ಎಳೆ ವಯಸ್ಸಿನಲ್ಲಿ ಅಪಘಾತಕ್ಕೆ ಈಡಾಗಿದ್ದಾರೆ. ನನಗನ್ನಿಸುತ್ತದೆ, **ಈ ಅಪಘಾತಗಳಿಗೆ ಹೊಣೆ ಯಾರು ಎಂಬುದನ್ನು ನಾವು ಅತ್ಯಂತ ಪ್ರಾಮುಖ್ಯವಾಗಿ** ನೋಡಬೇಕು. ಎಲ್ಲಾ ರಸ್ತೆಗಳಲ್ಲೂ ಅಪಘಾತಗಳಾಗುತ್ತಿವೆ. ತಾವು ನೋಡಿದ್ದೀರಿ. ಅನೇಕ ಜನ ಮಾಡಿ ಶಾಸಕರುಗಳು, ಕಲಾವಿದರು, ಸಾಮಾನ್ಯ ಜನರು ರಸ್ತೆಯಲ್ಲಿ ಅಪಘಾತ ತೊಂದರೆಪಟ್ಟಿದ್ದಾರೆ. ಇದು ನಿದರ್ಶನ ಆಗಬಾರದು. ಇಂಥ ವ್ಯಕ್ತಿಗಳು ಅಪಘಾತಗಳಲ್ಲಿ ಸಾಯುವ ಪರಿಸ್ಥಿತಿ ಆಯಿತು ಎಂದರೆ ಅಪಘಾತಗಳನ್ನು ತಡೆಯುವುದಕ್ಕೆ ಪ್ರಾಣ ಹಾನಿಯನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕವಾದ ಚಿಂತನೆ ಆಗಬೇಕಾದುದು ಕರ್ತವ್ಯ. ಆದಾಗಲಿಲ್ಲ ಎಂದರೆ ಅಪಘಾತಗಳು ಆಗುತ್ತಲೇ ಇರುತ್ತವೆ. ತಮಗೆ ಗೊತ್ತಿರಬೇಕು, ಹಿಂದೆ ತುಮಕೂರು ರಸ್ತೆಯಲ್ಲಿ ಎಷ್ಟೊಂದು ಅಪಘಾತಗಳಾಗಿವೆ ಮೈಸೂರು ರಸ್ತೆಯಲ್ಲಿ ಎಷ್ಟೊಂದು ಅಪಘಾತಗಳಾಗಿವೆ, ಆಗುತ್ತಿವೆ ಎಂದು. ತಮಗೆ ಗೊತ್ತು ಅವರು ಎಂತೆಂಥ ಮಹನೀಯರುಗಳು ಎಂದು ಅನೇಕ ಜನರು. ಅವರುಗಳ ಹೆಸರು ಹೇಳಬೇಕು ಅಂದರೆ ದೊಡ್ಡ ಪೆಟ್ಟಿಯಾಗುತ್ತದೆ. ಅದು ಅಪಘಾತದಲ್ಲಿ ಅಸು ನೀಗಿದಂಥವರು ಪಟ್ಟಿ. ಇದೆಲ್ಲಾ ನೋಡಿದಾಗ ನನಗನ್ನಿಸುತ್ತದೆ ಒಂದು ರೀತಿ ಸಭೆಯಲ್ಲಿ ಸಂತಾಪ ಮಾಡುತ್ತೇವೆ. ಆದರೆ ಆ ಅಪಘಾತಗಳನ್ನು ತಡೆಹಿಡಿಯದಿದ್ದರೆ ಪ್ರಯೋಜನವಾಗುವುದಿಲ್ಲ. ನಾಳೆ ಇದನ್ನು ತಡೆಹಿಡಿಯುವುದಕ್ಕೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚಿಂತನೆ ಮಾಡಬೇಕು. ಶ್ರೀ ಎನ್. ಜಿ. ಹಾಲಪ್ಪನವರು. ನನಗೂ ಅವರಿಗೂ ಬಹಳ ಬಾಂಧವ್ಯ. ಯಾವಾಗಲೂ ಅವರಿಗೆ ನಶ್ಯ ಇರಲೇಬೇಕು. ಕಚ್ಚಿ ಕೈಯಲ್ಲಿಟ್ಟುಕೊಂಡು ನಶ್ಯ ಹಾಕುತ್ತಿದ್ದರು ನಾನು ಅವರಿಗೆ ಹೇಳುತ್ತಿದ್ದೆ ನಿಮ್ಮ ಕೈ ಶುದ್ಧ ಇಲ್ಲ ನಮ್ಮ ಹತ್ತಿರ ಬರಬೇಡಿ ಎಂದು. ಕೈ ಶುದ್ಧ ಅಂದರೆ ಏನು? ನಶ್ಯ ಹಾಕಿಕೊಂಡು ಬರಬೇಡಿ ಎಂದು. ಅವರು ಬಹಳ ಒಳ್ಳೆಯ ಸಹೃದಯ ಇರತಕ್ಕವರು. ಅವರಿಗೂ ಮುಖ್ಯಮಂತ್ರಿಗಳಿಗೂ ಯಾವಾಗಲೂ ಸೋಲು ಗೆಲುವು ಇತ್ತು. ಅದು ಯಾವರೀತಿ ಎಂದರೆ ಹಿಂದೆ ಒಂದು ಆದರ್ಶ ಇತ್ತು. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಮತ್ತು ಬಿ.ಟಿ.ರಾಮಯ್ಯನವರು ಚುನಾವಣೆಯಲ್ಲಿ ನಿಲ್ಲುತ್ತಿದ್ದರು. ಆದರೂ ಅವರಿಬ್ಬರೂ ಸ್ನೇಹಿತರಾಗಿದ್ದರು. ಅದೇ ಸ್ನೇಹ ಬಾಂಧವ್ಯ ಹಾಲಪ್ಪನವರು ಮತ್ತು ಜೆ.ಹೆಚ್. ಪಟೇಲರಿಗೆ ಮತ್ತು ಅವರು ಎಂದೂ ಗದ್ದಲ ಮಾಡಿಕೊಂಡರಲ್ಲ, ಪ್ರೀತಿ ವಿಶ್ವಾಸದಿಂದ ಬೆಳೆದವರು. ಅಂಥ ಒಬ್ಬ ವ್ಯಕ್ತಿಯ ನಿಧನದಿಂದ ರಾಜ್ಯಕ್ಕೆ ನಷ್ಟವಾಗಿದೆ. ಮತ್ತೆ ವಿಠಲದಾಸ ಶೆಟ್ಟಿಯವರು. ಇವರು ನನಗೆ ಬಹಳ ಬೇಕಾಗಿದ್ದವರು. ನಮ್ಮ ಜೊತೆಯಲ್ಲಿ ಇದ್ದಂಥದವರು. ಅವರು ಆಹಾರ ಮಂತ್ರಿಯಾಗಿದ್ದರು. ತಮಗೆ ಗೊತ್ತ ಇಲ್ಲೇ ಇದ್ದು ಬಹಳ ತ್ಯಾಗ ಮಾಡಿ ಕೆಲಸ

ಮಾಡಿರುವವರು. ಆಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರೇ ಬಹಳ ಪ್ರಾಬಲ್ಯ. ನಾಗಪ್ಪ ಆಳ್ವ ಅವರ ಜೊತೆಗೆ ಇವರೂ ಎತ್ತರವಾಗಿ ಬೆಳೆದವರು. ಇವರ ನಿಧನದಿಂದ ಅಪಾರ ನಷ್ಟವಾಗಿದೆ. ಶ್ರೀ ಪಿ. ವಿ. ಐತಾಳರು ಬಹಳ ವರ್ಣರಂಜಿ ವ್ಯಕ್ತಿ. ಅವರು ನಮ್ಮ ಜೊತೆಯಲ್ಲಿ ಸಭೆಯಲ್ಲಿದ್ದರು. ಆಗ ಇಲ್ಲಿ ಮಂಗಳೂರು ಭೂತ ಬಂತು ಎಂದು ಹೇಳುತ್ತಿದ್ದರು. ಅವರು ಪ್ರತಿಸಲ ಭಾಷಣ ಮಾಡುವಾಗ ಭೂತ ಬಂದಿದೆ ಸಭೆಯಲ್ಲಿ ಎಂದು ಹೇಳುತ್ತಿದ್ದರು. ಸುಮಾರು 1967ರ ಕಾಲದಲ್ಲಿ ಅದನ್ನು ಹೇಳುತ್ತಿದ್ದರು. ಅದೇರೀತಿ ಭೋಜರಾ ಅವರು ನಿಧನರಾಗಿದ್ದರೆ. ಚಿ. ನಾ. ಮಂಗಳ ಅವರು ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ಮಹಿಳೆಯರ ಒಂದು ಶಕ್ತಿಗಾಗಿ, ಮಹಿಳೆಯರ ಒಂದು ಕೀರ್ತಿಗಾಗಿ ಹೋರಾಡಿದ್ದಾರೆ. ಅವರು ಬರೆದ ಅನೇಕ ಸಾಹಿತ್ಯ ಕೊಡುಗೆಯಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇ ರೀತಿ ತುಳಸಿ ಅವರು ಅತ್ಯಂತ ಒಳ್ಳೆಯ ಸೇವೆ ಮಾಡಿರತಕ್ಕವರು. ಈ ಮಹನೀಯರ ನಿಧನಕ್ಕೆ ನನ್ನ ಪರವಾಗಿ, ನಾಡಿನ ಪರವಾಗಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಮಂಡಿಸಿರತಕ್ಕ ಸಂತಾಪಸೂಚನೆಯಲ್ಲಿ ವಿವಿಧ ಭಾಗಗಳಿಗೆ ಸೇರಿದಂಥ ಗಣ್ಯರುಗಳಿದ್ದಾರೆ, ಸಾಹಿತಿಗಳಿದ್ದಾರೆ, ಅಧ್ಯಾತ್ಮಿಕವಾದಿಗಳಿದ್ದಾರೆ. ಜನರ ಮಧ್ಯೆ ಹಲವಾರು ವರ್ಷಗಳಿಂದ ದುಡಿದಿರತಕ್ಕವರಿದ್ದಾರೆ. ಇವರ ಅಗಲಿಕೆ ನಮ್ಮ ನಾಡಿಗೆ ಒಂದು ನಷ್ಟವಾಗಿದೆ. ಅದರಲ್ಲೂ ಪ್ರಮುಖವಾಗಿ ಶ್ರೀಮಾನ್ ವೈ. ರಾಮಕೃಷ್ಣ ಅವರು 77ನೇ ಇಸವಿಯಲ್ಲಿ ಮೊದಲ ಬಾರಿಗೆ ಕೋಲಾರ ಕ್ಷೇತ್ರದಿಂದ ಜನತಾ ಪಕ್ಷದ ಪರವಾಗಿ ಲೋಕಸಭೆಗೆ ಸ್ಪರ್ಧೆ ಮಾಡಿದಾಗ ಪರಿಚಯ ಆಯಿತು. ಚುನಾವಣಾ ಪ್ರಚಾರಕ್ಕೆ ನಾನು ಅವರ ಜೊತೆಯಲ್ಲಿ ಹೋಗುತ್ತಾ ಇದ್ದೆ. ಅವರು ಎಷ್ಟು ಸರಳರು ಸಜ್ಜನರು ಅಂದರೆ ತಮ್ಮ ತಾಲ್ಲೂಕಿನಲ್ಲಿ ಚುನಾವಣಾ ಪ್ರಚಾರ ಮಾಡುವಾಗ ನಮ್ಮ ಕಾರು ಕೆಟ್ಟುಹೋಯಿತು. ಅಲ್ಲಿಂದ ಕೋಲಾರದವರೆಗೆ ನಾವು ಮೂರು ಜನರು ಸೇರಿಕೊಂಡು ತಳ್ಳಿಕೊಂಡು ಬಂದೆವು. ಅಂಥ ಪರಿಸ್ಥಿತಿಯಲ್ಲಿ ಅವವು ಯಾವುದೇ ರೀತಿಯಲ್ಲಿ ಬೇಸ ಮಾಡಿಕೊಳ್ಳಲಿಲ್ಲ. ವಯಸ್ಸಾಗಿರುವವರು. ಆರೋಗ್ಯ ಕೂಡ ಚೆನ್ನಾಗಿರಲಿಲ್ಲ. ಅಷ್ಟು ಸರಳ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರಲ್ಲಿ ಯಾವುದೇ ರೀತಿಯಾದ ಹಿಪೋಕ್ರೆಸಿ ಇರಲಿಲ್ಲ. ತಮಗೆ ಏನನ್ನಿಸುತ್ತದೆ ಅದು ಸರಿಯಾಗಿರಬಹುದು ತಪ್ಪಾಗಿರಬಹುದು ಅದನ್ನು ನೇರವಾಗಿ ಹೇಳತಕ್ಕ ಒಂದು ಅಬ್ಯಾಸ ಅವರಿಗೆ ಇತ್ತು. ಮತ್ತು ನಾನು ಸದನದಲ್ಲಿ ಅವರನ್ನು ಇದೇ ಪ್ರಥಮಬಾರಿಗೆ ನೋಡಿದ್ದು.

ಬಹಳ ಹಿರಿಯ ಸದಸ್ಯರು. ಅನುಭವಿಗಳಾಗಿದ್ದವರು. ಪ್ರತಿಯೊಂದು ವಿಷಯವನ್ನೂ ಬಹಳ ಗಂಭೀರವಾಗಿ, ಅಲವಾಗಿ ಅಭ್ಯಾಸ ಮಾಡತಕ್ಕ ಒಂದು ಶಕ್ತಿ ಅವರಲ್ಲಿತ್ತು. ಹಾಗಾಗಿ ಅವರು ಸದನದಲ್ಲಿದ್ದಂಥ ಸಂದರ್ಭದಲ್ಲಿ ಅವರು ಮಾತನಾಡುವ ಸಂದರ್ಭಲ್ಲಿ ಸದನಕ್ಕೆ ಒಂದು ರೀತಿಯಾದ ತೂಕ ಹೆಚ್ಚಾಗುತ್ತಿತ್ತು ಮತ್ತು ಗೌರವ ಕೂಡ ಹೆಚ್ಚಾಗುತ್ತಿತ್ತು ಅಂತಹ ನಿಧನರಾಗಿದ್ದಾರೆ. ಹಾಗೆಯೇ ಅಂಬಡಗಟ್ಟಿ ಅವರು. ಅವರು ಯುವಕರು. ಬಹಳ ಸೌಜನ್ಯದ ವ್ಯಕ್ತಿ. ಅವರು ಆಕಸ್ಮಿಕ ಮರಣವಾದರು ಎಂದು ಪತ್ರಿಕೆಯಲ್ಲಿ ನೋಡಿಒಂದು ರೀತಿ ನನಗೆ ಬೇಸರವಾಯಿತು. ಒಬ್ಬ ಉದಯೋನ್ಮುಖ ಶಾಸಕ ಈ ರೀತಿ ಅಪಘಾತದಲ್ಲಿ ಅಸುನೀಗಿದ್ದನ್ನು ಕೇಳಿ ಬಹಳ ಬೇಸರವಾಯಿತು. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಹಾಗೆ ಅಪಘಾತಗಳನ್ನು ತಡೆಯುವುದಕ್ಕೆ ಏನಾದರೂ ಒಂದು ಚಿಂತನೆ ಮಾಡಬೇಕು. ಯಾವುದಾದರೂ ರೀತಿಯಲ್ಲಿ ತಡೆಗಟ್ಟತಕ್ಕ ಅವಶ್ಯಕತೆ ಇದೆ. ಹಾಗೆಯೋ ಚಿ.ನ.ಮಂಗಳ ಅವರು ಹೆಸರಾಂತ ಸಾಹಿತಿಗಳಾಗಿದ್ದವರು. ಕರ್ನಾಟಕ ರಾಜ್ಯದಲ್ಲಿ ಬಹುಶಃ ಮೊದಲಿಗೆ ಪ್ರಜ್ಞಾವಂತ ಮತ್ತು ಸಾಮಜಿಕ ಕಳಕಳಿ ಇದ್ದಂಥ ಒಬ್ಬ ಸಾಹಿತಿಯಾಗಿದ್ದರು. ಸ್ತ್ರೀಯರ ಪರವಾದ ಅವರ ನಿಲುವು ಏನಿದೆ ಅದು ನಿಜವಾಗಿಯೂ ಇವತ್ತಿಗೂ ಮಾರ್ಗದರ್ಶನ ಆಗತಕ್ಕಂಥದ್ದು ಎಂಬುದು ಅವರ ಸಾಹಿತ್ಯದಲ್ಲಿ ನಾವು ನೋಡಬಹುದಾಗಿದೆ. ಅದೇ ರೀತಿ ಉಳಿದ ಎಲ್ಲಾ ಹಿರಿಯರು ಮತ್ತು ಅನುಭವಿಗಳ ಬಗ್ಗೆ ಸಂತಾಪವನ್ನು ಇದರಲ್ಲಿ ಸೂಚಿಸಲಾಗಿದೆ. ಅವರೆಲ್ಲರಿಗೂ ಕೂಡ ನನ್ನ ಪಕ್ಷದ ಪರವಾಗಿ ಸಂತಾಪವನ್ನು ವ್ಯಕ್ತಪಡಿಸಿ ತಾವು ಮಂಡಿಸಿರತಕ್ಕ ಸೂಚನೆಗೆ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಡಿ. ಮಂಜುನಾಥ (ಹಿರಿಯೂರು) : ಮಾನ್ಯ ಅಧ್ಯಕ್ಷರೇ, ಹಾಲಿ ಸದಸ್ಯರಾಗಿದ್ದ ಇಬ್ಬರು ಮತ್ತು 5 ಜನ ಮಾಡಿ ಸದಸ್ಯರು ಹಾಗೂ ಇಬ್ಬರುಸಮಾಜಸೇವೆ ಮಾಡಿದಂಥವರ ನಿಧನದ ಬಗ್ಗೆತಾವು ತಂದಿರುವ ಸಂತಾಪ ಸೂಚನೆ ಬಗ್ಗೆ ಈಗಾಗಲೇ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಶ್ರೀ ವೈ. ರಾಮಕೃಷ್ಣ ಅವರು 1967ರಲ್ಲಿ ನಾನು ಈ ಸಬೆಯ ಉಪಾಧ್ಯಕ್ಷನಾಗಿದ್ದಾಗ ಮಂತ್ರಿಯಾಗಿದ್ದರು. ಅವರು ಆಗಿನಿಂದಲೂ ನನಗೆ ಬಹಳ ಆತ್ಮೀಯರಾಗಿದ್ದರು. ಒಳ್ಳೆಯ ಸಮಾಜಸೇವಕರು. ಅದಲ್ಲದೆ ಮಂತ್ರಿಯಾಗಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಲೋಕಸಭೆಯ ಸದಸ್ಯರಾಗಿ ಎರಡು ವರ್ಷ ಇದ್ದರು. ಇತ್ತೀಚೆಗೆ ಅವರ ಆರೋಗ್ಯ ಸ್ವಲ್ಪ ಕೆಟ್ಟಿತ್ತು. ನಾನು ಆಗಾಗ ಹೇಳುತ್ತಿದ್ದೆ ನೀವು ಸ್ವಲ್ಪ ಆರೋಗ್ಯ ನೋಡಿಕೊಳ್ಳಿ ಎಂದು. ಅವರು ಬಹಳ ಸಕ್ರಿಯವಾಗಿ ಕಾರ್ಯಕಲಾಪಗಳಲ್ಲಿ ಭಾಗ ವಹಿಸುತ್ತಿದ್ದರು. ಅವರು ಎಲ್ಲಾ ನೋಟ್ಸ್ ಮಾಡಿಕೊಂಡು ಬಂದು ಮಾತನಾಡುತ್ತಿದ್ದರು. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮೀಸಲಾತಿ ಅನುಕೂಲಗಳ ಬಗ್ಗೆ

ಯಾವರೀತಿ ಅನಾನುಕೂಲಗಳಾಗಿವೆ ಎಬ ಬಗ್ಗೆ ಬಹಳ ಕೂಲಂಕಷವಾಗಿ ಸಬೆಯ ಮುಂದೆ ಮಂಡಿಸುತ್ತಿದ್ದರು. ಅಂಥವರು ಈ ದಿವಸ ನಮ್ಮನ್ನು ಅಗಲಿದ್ದಾರೆ. ಆದರಿಂದ ಇಡೀ ನಮ್ಮ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ನಾನಂತೂ ರೈಯಕ್ತಿಕವಾಗಿ ಈಗ ನನ್ನ ದುಃಖವನ್ನು ವ್ಯಕ್ತಪಡಿಸುತ್ತಿದ್ದೇನೆ. ಎರಡನೆಯದಾಗಿ ಏಂಬಡಗಟ್ಟಿ ಅವರು. ಇವರು ಯುವಕರಾಗಿದ್ದರು. ಪಾಪ, ದುರಾದೃಷ್ಟ, ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆಂದು ಗೊತ್ತಾಯಿತು. ಮಾಡಿ ಸಚಿವರಾದ ಎನ್. ಜಿ. ಹಾಲಪ್ಪನವರು ಮತ್ತು ವಿಠಲದಾಸ ಶೆಟ್ಟಿಯವರೂ ಸಹ 67ರಲ್ಲಿ ಸದಸ್ಯರಾಗಿದ್ದರು. ವಿಠಲದಾಸ ಶೆಟ್ಟಿ ಅವರು ಮಂತ್ರಿಯಾಗಿದ್ದರು. ಅವಿರಬ್ಬರೂ ನನಗೆ ತುಂಬಾ ಆತ್ಮೀಯರು. ಹಾಲಪ್ಪನವರಂತೂ ತತಮ್ಮ ವಾಟಾಳರು ಹೇಳಿದಹಾಗೆ ನಶ್ಯ ಎಲ್ಲರಿಗೂ ಕೊಡುತ್ತಿದ್ದರು. ಸ್ನೇಹಿತರು ಬಂದರೆ ನಶ್ಯ ಕೊಡುತ್ತಿದ್ದರು. ನಶ್ಯದ ಡಬ್ಬಿಯನ್ನು ಅರರು ಯಾವಾಗಲೂ ಇಟ್ಟುಕೊಳ್ಳುತ್ತಿದ್ದರು.

ಶ್ರೀ ಎನ್. ಜಿ. ಹಾಲಪ್ಪನವರು ಸಹ ಮೂರುಬಾರಿ ಇಲ್ಲಿ ಆಯ್ಕೆಯಾಗಿ ಬಹಳ ಸೇವೆ ಸಲ್ಲಿಸಿದ್ದಾರೆ. ಇವತ್ತು ಅವರ ನಿಧನದ ಬಗ್ಗೆ ನಾನಂತೂ ದುಃಖವನ್ನು ವ್ಯಕ್ತಪಡಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಶ್ರೀ ವಿಠಲದಾಸಶೆಟ್ಟರು. ಅವರು ಸಹ ಮೂವತ್ತು ವರ್ಷಗಳ ಕೆಳಗೆ ನಾನು ಉಪಾಧ್ಯಕ್ಷನಾಗಿದ್ದಾಗ ಮಂತ್ರಿಯಾಗಿದ್ದರು. ಅವರ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಳ್ಳೆಯ ಸೇವೆ ಮಾಡಿದ್ದಾರೆ. ಅವರ ನಿಧನಕ್ಕೂ ಕೂಡ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿ ಡಾ।। ಭೋಜರಾಜ್‌ಅವರು, ಶ್ರೀ ವೈ. ಮಂಜಯ್ಯ ಶೆಟ್ಟಿಯವರು, ಶ್ರೀ ಪಿ. ವಿ. ಐತಾಳರು, ಇವರೆಲ್ಲ 1967 ರಲ್ಲಿ ಇದ್ದರು. ಅವರ ಧ್ವನಿ ಬಳ ದೊಡ್ಡದು, ನಾನು ಅಲ್ಲಿ ಕುಳಿತಿದ್ದಾಗ ಹೇಳುತ್ತಿದ್ದೆ ಐತಾಳರೇ, ಮೈಕ್ ಇದೆ, ನೀವು ಬಹಳ ನಿಧಾನವಾಗಿ ಮಾತನಾಡಿ ಎಂದು. ಅವರು ವಕೀಲರಾಗಿದ್ದರು ಮತ್ತು ನಮ್ಮ ಸಂವಿಧಾನದ ಬಗ್ಗೆ ಬಹಳ ಹೆಚ್ಚಿಗೆ ಮಾತನಾಡುತ್ತಿದ್ದರು. ಇವರು ಸಹ ನಿಧನರಾಗಿರುವುದು ನಿಜಕ್ಕೂ ನನಗೆ ದುಃಖವಾಗಿದೆ. ಅದೇ ರೀತಿ ಇನ್ನಿಬ್ಬರು ಸಮಾಜಸೇವೆ ಮಾಡಿದಂಥವರು, ಶ್ರೀಮತಿ ಚಿ. ನ. ಮಂಗಳಾ ಮತ್ತು ಆಚಾರ್ಯ ತುಳಸಿಯವರು. ಇವರುಗಳ ನಿಧನಕ್ಕೂಸಹ ನಾನು ನನ್ನ ದುಃಖವನ್ನು ವ್ಯಕ್ತಪಡಿಸುತ್ತೇನೆ. ಈ ಮಹನೀಯರೆಲ್ಲರೂ ಇವತ್ತಿನದಿವಸ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಸೇವೆ ನಮಗೆ ಇನ್ನೂ ಬೇಕಾಗಿತ್ತು. ಆದರೂ ಸಹ ಅವರು ನಮ್ಮನ್ನಗಲಿ ಹೋಗಿರುವುದರಿಂದ ಇವತ್ತಿನ ದಿವಸ ಅವರ ಸೇವೆಯನ್ನು ಸ್ಮರಿ ಶ್ರದ್ಧಾಂಜಲಿಯನ್ನು ಅರ್ಪಿಸುವ ಮೂಲಕ ನಾನು ಸಹ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ ತಾವು ತಂದಿರುವ ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ಹಿರಿಯರಾದಂಥ ಶ್ರೀ ವೈ. ರಾಮಕೃಷ್ಣ ಅವರು ನಿಜಕ್ಕೂ ನಮ್ಮಂಥ ಹೊಸದಾಗಿಸದನಕ್ಕೆ ಬಂದಂಥವರಿಗೆ ಒಳ್ಳೆಯ ಮಾರ್ಗದರ್ಶಕರಾಗಿದ್ದರು. ನಾನು ಮಂತ್ರಿಯಾದ ಮೇಲೆ ಬಹುಶಃ ಮೊದಲನೇ ಸಲ ನನ್ನ ಮನೆಗೆ ಬಂದು ಪಾಟೀಲರೇ, ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಹೇಳುವುದರ ಜೊತೆಗೆ ಇಂತಿಂಥ ತಪ್ಪುಗಳನ್ನು ಮಾಡುತ್ತಿದ್ದೀರಿ, ಅವುಗಳನ್ನು ತಾವು ತಿದ್ದುಕೊಳ್ಳಿ ಎನ್ನತಕ್ಕಂಥ ಮಾತನ್ನು ಹಲವಾರು ಸಂದರ್ಭಗಳಲ್ಲಿ ಹೇಳಿ ನನಗೆ ಮಾರ್ಗದರ್ಶಕರಾಗಿದ್ದರು ಎಂದು ಹೇಳುವುದಕ್ಕೆ ಇವತ್ತು ನನಗೆ ದುಃಖವೆನಿಸುತ್ತದೆ. ಇವತ್ತು ಅವರು ನಮ್ಮನ್ನೆಲ್ಲ ಅಗಲಿದ್ದಾರೆ. ಇದರಿಂದ ಕೇವಲ ಈ ಸದನಕ್ಕೆ ಅಲ್ಲ, ಈ ರಾಜ್ಯಕ್ಕೆ ಅಲ್ಲ, ಈ ರಾಷ್ಟ್ರಕ್ಕೇ ತುಂಬಲಾರದಂಥ ನಷ್ಟವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು, ಮಿತ್ರರಾದ ಶ್ರೀಕಾಂತ ಅಂಬಡಗಟ್ಟೆಯವರು ನನಗೆ ಆತ್ಮೀಯರಾಗಿದ್ದರು. ಈ ಸದನದಲ್ಲಾಗಲೀ, ತಮ್ಮ ಕ್ಷೇತ್ರದ ಕೆಲಸಕ್ಕಾಗಲೀ, ಬಹಳ ಪ್ರಯಾಸಪಟ್ಟು ತಮ್ಮ ಕ್ಷೇತ್ರದ ಕೆಲಸ ಮಾಡುತ್ತಿದ್ದರು. ಜಿಲ್ಲೆಯಯಲ್ಲಿ ನಾವು ಯಾವುದೇ ಒಂದು ಮೀಟಿಂಗ್ ಮಾಡಿದರೂ ಕೂಡ ಬಹಳ ವಿವರವಾಗಿ ಚರ್ಚೆಮಾಡಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಇಂತಹ ಒಬ್ಬ ಯುವಕ ನಮ್ಮನ್ನು ಅಗಲಿರುವುದು ನಿಜವಾಗಿಯೂ ನಮ್ಮ ಜಿಲ್ಲೆಗಂತೂ ತುಂಬಲಾರದಂಥ ಹಾನಿಯಾಗಿದೆ. ಅದೇರೀತಿ ಈ ಸದನಕ್ಕೆ ಮತ್ತು ರಾಜ್ಯಕ್ಕೆ ಕೂಡ ಹಾನಿಯಾಗಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಹಾಲಪ್ಪನವರಿಗೂ ನನಗೂ ಮೊದಲಿನಿಂದಲೂ ಪರಿಚಯ ಇತ್ತು. ಆದರೆ ನಾನು ಮಂತ್ರಿಯಾದಮೇಲೆ ಆ ಕ್ಷೇತ್ರದ ಪ್ರವಾಸಕ್ಕೆ ಹೋದಾಗ ಒಮ್ಮೆ ನಾನು ಮತ್ತು ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿದ್ದಾಗ ಅವರು ಕೂಡ ಆ ಸಭೆಯಲ್ಲಿ ಇದ್ದರು. ಅವರಿಬ್ಬರ ಸಂಬಂಧ ನೋಡಿ ನನಗೆ ಆಶ್ಚರ್ಯವಾಯಿತು. ಮೂರು-ನಾಲ್ಕು ಸಾರಿ ಅವರು ಸೋತಿದ್ದಾರೆ, ಇವರು ಗೆದ್ದಿದ್ದಾರೆ. ಆದರೆ ಅವರು ಅಣ್ಣತಮ್ಮಂದಿರ ತರಹ ನಡೆದು ಕೊಳ್ಳುತ್ತಿದ್ದರು. ಇದನ್ನು ನೋಡಿ ನಾವು ಏನು ಮಾರ್ಗದರ್ಶನ ತೆಗೆದುಕೊಳ್ಳಬೇಕು ಎಂದರೆ ರಾಜಕೀಯ ಬಹಳ ದಿವಸ ಉಳಿಯುವುದಿಲ್ಲ. ಆದರೆ ಮಿತೃತ್ವ ಗೆಳೆತನ, ಭಾಂಧವ್ಯ ಬಹಳ ದಿವಸ ಇರುತ್ತದೆ. ಅವರು ನಿಧನರಾದಾಗ ನಾನು ಹೋಗಿದ್ದೆ ಮತ್ತು ಮುಖ್ಯ ಮಂತ್ರಿಗಳು ಕೂಡ ಬಂದಿದ್ದರು. ಅವರು ಮನೆಯವರಲ್ಲ ಅವರನ್ನು ಅಪ್ಪಿಕೊಂಡು ಅತ್ತರು. ಹೀಗೆ ಅವರಲ್ಲಿ ಇಷ್ಟೊಂದು ಒಳ್ಳೆಯ ಬಾಂಧವ್ಯ ಇತ್ತು. ಇವರ ತಂದೆ ಮತ್ತು ಅವರ ತಂದೆ ಕೂಡ ಅಲ್ಲೆಲ್ಲ ಜಿಲ್ಲೆಯಲ್ಲಿ ಮಾಡಿದ ಕೆಲಸಗಳನ್ನು ಜನ ನೆನೆಸಿಕೊಂಡರು. ಇಂತಹ

ಒಂದು ಒಳ್ಳೆಯ ಬಾಂಧವ್ಯ ಇಟ್ಟುಕೊಂಡಿದ್ದಂಥ ಹಾಲಪ್ಪನವರು ಇವತ್ತು ನಮ್ಮನ್ನೆಲ್ಲ ಅಗಲಿರುವುದು ತುಂಬಲಾರದಂಥ ಹಾನಿಯಾಗಿದೆ. ಇನ್ನು ಉಳಿದವರ ಪರಿಚಯ ನನಗೆ ಇಲ್ಲದಿದ್ದರೂ ಕೂಡ ಅವರೆಲ್ಲರೂ ಕೂಡ ಈ ರಾಜ್ಯಕ್ಕೆ, ಸದನಕ್ಕೆ ಸೇವೆಸಲ್ಲಿಸಿದವರಾಗಿದ್ದು, ಅವರೆಲ್ಲರಿಗೂ ಕೂಡ ದೇವರು ಒಳ್ಳೆಯದು ಮಾಡಲಿ, ಅವರು ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದುಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರತಕ್ಕಂಥ ಈ ಸಂತಾಪ ಸೂಚನೆಗೆ, ತಮ್ಮ ಧ್ವನಿಗೆ ನನ್ನ ಧ್ವನಿಯನ್ನೂ ಸೇರಿಸಿ, ಇವತ್ತು ನಿಧನರಾಗಿರುವವರ ಪೈಕಿ ನಾಲ್ಕುಜನ ಈ ಸದನದಲ್ಲಿದ್ದವರು, 1967ರಿಂದ ಅವರು ನನಗೆ ಪರಿಚಯ ಇದ್ದವರಾಗಿದ್ದರು. ವೈ ರಾಮಕೃಷ್ಣ, ವಿಠಲದಾಸಶೆಟ್ಟಿಯವರು, ಐತಾಳರು ಮತ್ತು ಹಾಲಪ್ಪನವರು. ಈಗ ನಮಗೆ ಏನಾಗಿದೆ ಎಂದರೆ, ಶಾಸಕರು ಎಂದರೆ ಹೀಗಿರಬೇಕು ಎನ್ನುವುದಕ್ಕೆ ಒಂದು ಉದಾಹರಣೆ ಶ್ರೀ ರಾಮಕೃಷ್ಣ ಅವರು ಆಗಿದ್ದರು. ನಾವು ಒಬ್ಬರನ್ನು ಕಳೆದುಕೊಂಡು ಬಡವರಾಗಿದ್ದೇವೆ ಎಂದು ಉಪಚಾರಕ್ಕೆ ಮಾತನಾಡುತ್ತೇವೆ. ವಾಸ್ತವವಾಗಿ ಇವತ್ತು ಈ ಸಭೆ ಬಡವಾಗಿದೆ ಎಂಬ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಶಾಸಕನಾಗಿ ಶಾಸಕರ ಕೆಲಸ ಮಾಡುತ್ತಿದ್ದವರು ಅವರೇ. ನಾವು ಉಳಿದದ್ದು ಎಲ್ಲ ಮಾಡುತ್ತೇನೆ. ಜನ ನಮ್ಮಿಂದ ಅಮಲ್ದಾರರ ಕೆಲಸವನ್ನು ನಿರೀಕ್ಷಿಸುತ್ತಾರೆ. ಎಕ್ಸಿಕ್ಯೂಟಿವ್ ಇಂಡಿನಿಯರ್, ಪೋಲೀಸ್ ಇನ್‌ಸ್ಪೆಕ್ಟರ್ ಕೆಲಸವನ್ನು ಅವರು ನಿರೀಕ್ಷೆ ಮಾಡುತ್ತಾರೆ. ಶಾಸನ ಮಾಡುವುದು ಬಿಟ್ಟು, ಶಾಸನ ರಚನೆ ಮಾಡುರುದು ಬಿಟ್ಟು ಉಳಿದ ಎಲ್ಲವನ್ನೂ ನಾವು ಮಾಡುತ್ತೇವೆ. ಶಾಸನವನ್ನೇ ಮಾಡುವುದರಲ್ಲಿ ಆಸಕ್ತಿ ವಹಿಸಿದವರು ಅವರು ಒಬ್ಬರು ಒಂದು ಬಿಲ್ ಪಾಸ್ ಆಗಬೇಕಾದರೂ ಕೂಡ ಅದರಲ್ಲಿರುವ ಪ್ರತಿಯೊಂದು ಪದವನ್ನೂ ಸಹ ಓದಿ, ಅದನ್ನು ಅರ್ಥ ಮಾಡಿಕೊಂಡು ಈ ಶಾಸನದಿಂದ ಸಮಾಜಕ್ಕೆ ಆಗತಕ್ಕಂಥ ಅಘಾತವೇನು ಎಂಬುದನ್ನು ತಿಳಿದುಕೊಂಡು ಸರ್ಕಾರದ ಕಿವಿಹಿಂಡುವ ಕೆಲಸವನ್ನು ಅವರು ಯಥೇಚ್ಚವಾಗಿ ಮಾಡುತ್ತಿದ್ದರು. ಬಹುಶಃ ಸರ್ಕಾರದವರು ಕೂಡ ರಾಮಕೃಷ್ಣ ಇದ್ದಾರೆ ಎಂದು ಬಿಲ್ ತಂದಾಗ, ಇದು ಬಗೆಹರಿಯುವ ಪರಿಸ್ಥಿತಿ ಇಲ್ಲವೆಂದು ಹೇಳುವ ಭಾವನೆಗೆ ಬರುವ ಮಟ್ಟದಲ್ಲಿ ಅವರು ಅಬ್ಯಾಸ ಮಾಡಿಕೊಂಡು ಶಾಸಕರ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಬಹುಶಃ ಅವರು ಈ ಸದನದಲ್ಲಿ ಯಾವರೀತಿ ನಡೆದುಕೊಂಡರೋ ಅವರಿಂದ ನಾವೆಲ್ಲರೂ ನಾನೂ ಸೇರಿ ಎಲ್ಲರೂ ಪಾಠ ಕಲಿಯಬೇಕಾದದ್ದು ಬಹಳ ಇದೆಯೆಂದು ನನ್ನ ಅನಿಸಿಕೆ. ನಿಜವಾಗಿಯೂ ಅವರ ನಿಧನದಿಂದ ಸದನ ಬಡವಾಗಿದೆ, ಈ ರಾಜ್ಯಕ್ಕೆ ನಷ್ಟವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು

ಹಾಲಪ್ಪನವರು ನಾನು ಹೋಗೋ ಬಾರೋ ಎನ್ನುವ ಸ್ನೇಹಿತರಾಗಿದ್ದೆವು. ವಾಟಾಳರು, ಹಾಲಪ್ಪನವರು, ನಾನು ಎಲ್ಲರೂ ಹಾಗೆ ಇದ್ದೆವು. ಅವತ್ತು ಇದ್ದವರಲ್ಲಿ ಈಗ ಮಂಜುನಾಥ್ ಇದ್ದಾರೆ, ಫೋರ್ಪಡೆ ಇದ್ದಾರೆ. ಇನ್ನು ವಾಟಾಳರು ಮತ್ತು ನಾನು ಇದ್ದೇವೆ. ಇವರೆಲ್ಲಾ 67ರಿಂದ ಇದ್ದವರು. ಹಾಲಪ್ಪನವರು ಮತ್ತು ನಾವಂತೂ ಹೋಗೋ-ಬಾರೋ ಎನ್ನುವ ಸ್ನೇಹಿತರಾಗಿದ್ದೆವು ಕೆ. ಹೆಚ್. ಪಾಟೀಲರಿಗೂ ಅವರಿಗೂ ಬಹಳ ಕೇವಲ. ನಾವು ಮತ್ತು ಅವರು ಸದಾ ಹೆಚ್ಚಿಗೆ ಜೊತೆಯಲ್ಲಿಯೇ ಇರುತ್ತಿದ್ದರು. ಅವರು ಸತ್ತಿದ್ದನ್ನು ಕೇಳಿ ನನಗೆ ವಾಸ್ತವವಾಗಿ ಮನಸ್ಸಿಗೆ ಆಘಾತವಾಯಿತು. ವಿಠಲದಾಸಶೆಟ್ಟರು ಈ ಸಭೆಗೆ ಬಂದರೆ ಬೆಳಕೇ ಬಂದಹಾಗೆ ಇರುತ್ತಿತ್ತು. ಅವರು ಹಾಕಿಕೊಳ್ಳುತ್ತಿದ್ದ ಬಟ್ಟೆ, ಅವರ ಮುಖ, ಮುಖದ ಬಣ್ಣ ಏನೋ ಬೆಳಕೇ ನಡೆದುಕೊಂಡು ಬಂದತಾಗುತ್ತಿತ್ತು ಈ ಬಾಗಿಲಿನಿಂದಲೇ ಅವರು ಹೆಚ್ಚಾಗಿ ಬರುತ್ತಿದ್ದರು. ಅವರು ಇವತ್ತು ನಿಧನರಾಗಿದ್ದಾರೆ. ಇನ್ನು ನಮ್ಮ ಐತಾಳರು ಈ ಕಡೆ ಕುಳಿತುಕೊಳ್ಳುತ್ತಿದ್ದರು. ಬಹಳ ಯಶಸ್ವಿಯಾಗಿ, ಚೆನ್ನಾಗಿ ಮಾತನಾಡುವವರಾಗಿದ್ದರು. ಶಾಸನ ರಚನೆಯಲ್ಲಿ ಹೆಚ್ಚು ಭಾಗವಹಿಸಿ ಚೆನ್ನಾಗಿ ಕೆಲಸ ಮಾಡುತ್ತಿದ್ದವರು. ಮತ್ತು ಉಳಿದ ಮಹನಿಯರು ಏನು ನಿಧನರಾಗಿದ್ದಾರೆ, ಅವರ ಬಗ್ಗೆ ತಾವೇನು ಸಂತಾಪ ಸೂಚನೆಯನ್ನು ವ್ಯಕ್ತಮಾಡಿದ್ದೀರಿ, ಅದನ್ನು ನಾನು ಕೂಡ ಹಂಚಿಕೊಂಡು ನನ್ನ ಸಂತಾಪವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ತಾವು ಸಭೆಯಮುಂದೆ ತಂದಿರತಕ್ಕಂಥ ಸಂತಾಪ ಸೂಚನೆಗೆ ನಾನು ಕೂಡ ಧ್ವನಿಗೊಡಿಸುತ್ತಾ ಈಗಾಗಲೇ ಹಾಲಿ ಸದಸ್ಯರಾಗಿ ಇದ್ದವರು ಇಬ್ಬರು. ಅವರುಗಳು ಶಾಸಕರಾದ ಶ್ರೀ ವೈ. ರಾಮಕೃಷ್ಣ ಮತ್ತು ಶ್ರೀ ಅಂಬಡಗಟ್ಟಿಯವರು. ಇವರುಗಳ ನಿಧನದಿಂದ ವಿಶೇಷವಾಗಿ ವಿರೋಧಪಕ್ಷದ ಸಾಲಿಗೆ ಸೇರಿದವರನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಇವತ್ತು ವಿರೋಧ ಪಕ್ಷಕ್ಕೆಬಹಳ ನಷ್ಟವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಮಾತನಾಡಿದಂಥ ನಮ್ಮ ಸಭಾನಾಯಕರು, ವಿರೋಧ ಪಕ್ಷದ ಎಲ್ಲ ಸದಸ್ಯರೂ ಕೂಡ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ಮುಖ್ಯವಾಗಿ ವೈ. ರಾಮಕೃಷ್ಣ ಅವರು ಯಾವುದೇ ಒಂದು ವಿಷಯ ಸಭೆಯ ಮುಂದೆ ಪ್ರಸ್ತಾಪಕ್ಕೆ ಬಂದಾಗ, ಅದು ಪಾಸ್ ಆಗುವ ಸಂದರ್ಭದಲ್ಲಿ ಬಹಳ ತೀಕ್ಷ್ಣವಾದಂಥ ಟೀಕೆ ಟಿಪ್ಪಣಿಗಳನ್ನು ಮಾಡಿ, ಎಲ್ಲವನ್ನೂ ಕೂಡ ವಿಚಾರ ಮಾಡಿ ಓದಿ, ವ್ಯಾಸಂಗ ಮಾಡಿ ಅದನ್ನು ವಿರೋಧ ಮಾಡತಕ್ಕಂಥ ಪರಿಪಾಠವನ್ನು ರೂಢಿಸಿಕೊಂಡಿದ್ದನ್ನು ಬಹುಶಃ ನಾವೆಲ್ಲರೂ ನೋಡಿ ಕಲಿಯಬೇಕಾದಂಥ ಪ್ರಸಂಗ ಇದೆಯೆಂದ ಹೇಳಿದರೆ ತಪ್ಪಾಗಲಾರದು. ಮಾನ್ಯ ನಂಜೇಗೌಡರು ಅಭಿಪ್ರಾಯ ಪಟ್ಟಂತೆ,

ಅಕ್ಷರಶಃ ಶಾಸಕರಾಗಿ ಕೆಲಸ ಮಾಡುತ್ತಿದ್ದವರು ಶ್ರೀ ವೈ. ರಾಮಕೃಷ್ಣ ಅವರು ಎಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಅವರಿಗೆ ಆಳವಾದ ಅನುಭವವಿತ್ತು. ಅವರು ಆರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು ಮತ್ತು ಸಂಸತ್ತಿಗೆ ಆಯ್ಕೆಯಾಗಿದ್ದರು. ಆ ಎಲ್ಲಾ ಅನುಭವದ ಹಿನ್ನಲೆಯಲ್ಲಿ ಸಮರ್ಥವಾಗಿ ವಿರೋಧಪಕ್ಷಕ್ಕೆ ಒಂದು ಕಿರೀಟಪ್ರಾಯರಾಗಿ ಅವರ ಕೆಲಸ ಮಾಡಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಅದೇ ರೀತಿ ಶ್ರೀಕಾಂತ ಅಂಬಡಗಟ್ಟಿಯವರು ಕೂಡ. ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಪಕ್ಷಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಅವರು ಪ್ರತಿನಿಧಿಸತಕ್ಕಂಥ ಪ್ರತಿಷ್ಠಿತವಾದಂಥ ಕ್ಷೇತ್ರದಲ್ಲಿ ರೈತರನ್ನು ಸಂಘಟನೆ ಮಾಡಿ, ಹೋರಾಟ ಮಾಡಿ ತಮ್ಮ ಸ್ವಂತಶಕ್ತಿಯಿಂದ ಗೆದ್ದು ಬಂದಂಥ ಯುವಕ ಇವತ್ತು ನಮ್ಮನ್ನಗಲಿ ಹೋಗಿದ್ದಾರೆ. ನಾವು ಅವರಿಗೆ ಅವರ ಕ್ಷೇತ್ರದ ಬಗ್ಗೆ ಎಷ್ಟು ಮಮಕಾರ ಎಷ್ಟು ಪ್ರೀತಿ ಇತ್ತು ಎಂದು ಹೇಳಿದರೆ ನಿಜವಾಗಲೂ ಕೂಡ ಉನ್ನತ ಮಟ್ಟದ ನಾಯಕನಾಗಲು ಎಲ್ಲಾ ಲಕ್ಷಣಗಳು ಅವರಲ್ಲಿ ಕಾಣುತ್ತಿತ್ತು, ಅಂಥ ಒಬ್ಬ ಯುವಕನನ್ನು ನಾವು ಕಳಿದುಕೊಂಡಿದ್ದೇವೆ. ಅದೇ ರೀತಿಯಾಗಿ ನಮಗೂ ಕೂಡ ಗೊತ್ತಿರತಕ್ಕಂಥ ಸನ್ಮಾನ್ಯ ಎನ್. ಜಿ. ಹಾಲಪ್ಪನವರು ಮತ್ತು ಇತರ ಮಾನ್ಯ ಸದಸ್ಯರನ್ನು ಕಳಿದುಕೊಂಡಿದ್ದೇವೆ, ಇವರ ಅಗಲಿಕೆಯಿಂದ ಈ ಸದನಕ್ಕೆ, ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದರೆ ತಪ್ಪಾಗಲಾದು. ಅವರ ಆತ್ಮಕ್ಕೆ ಶಾಂತಿಯನ್ನು ಭವಂತನು ನೀಡಲಿ ಎಂದು ಪ್ರಾರ್ಥಿಸುತ್ತಾ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಈ ಸಂತಾಪ ಸೂಚಕ ನಿರ್ಣಯದ ಬಗ್ಗೆ ಮಾತನಾಡುವಾಗ ವಿಶೇಷವಾಗಿ ನಮಗೆಲ್ಲರಿಗೂ ಕೂಡ ಮಾರ್ಗದರ್ಶಕರಾಗಿದ್ದು ಶ್ರೀ ವೈ. ರಾಮಕೃಷ್ಣರವರನ್ನು ಕಳೆದುಕೊಂಡು ಇವತ್ತು ಸಂತಾಪ ಸೂಚನೆಯನ್ನು ವ್ಯಕ್ತಪಡಿಸುತ್ತೇವೆ ಎಂದು ನನಗಂತೂ ಕಲ್ಪನೆಗೆ ಬರುವುದಕ್ಕೆ ಆಗುತ್ತಾ ಇಲ್ಲ. ನಮಗೆಲ್ಲರಿಗೂ ಕೂಡ ಮಾರ್ಗದರ್ಶನ ಮಾಡುತ್ತಿರುವಂತಹ ಸಂದರ್ಭದಲ್ಲಿ ಆ ವ್ಯಕ್ತಿಯ ವ್ಯಕ್ತಿತ್ವವನ್ನು ನೆನಪು ಮಾಡಿ ಕೊಳ್ಳುವ ಸಂದರ್ಭದಲ್ಲಿ ಎರಡು ವಿಚಾರಗಳ ಬಗ್ಗೆ ನನಗಂತೂ ಸದಾ ಮಾರ್ಗದರ್ಶರಾಗಿರುತ್ತಿದ್ದರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ವ್ಯಕ್ತಿ ಬೆಳೆಯುತ್ತಾ ಬೆಳೆಯುತ್ತಾ ತಾನು ತುಂಬಾ ಅತೀ ಉನ್ನತ ಸ್ಥಾನಕ್ಕೆಹೋದಾಗ ಹೇಗಿರಬೇಕು ಎನ್ನುವ ಅಂಶವನ್ನು ಸನ್ಮಾನ್ಯ ವೈ. ರಾಮಕೃಷ್ಣರವರು ಜೀವನದಲ್ಲಿ ನಾವು ಕಾಣಬಹುದು. ಜನಸಾಮಾನ್ಯರ ಜೊತೆಗೆ ಸಾಮಾನ್ಯ ಕಾರ್ಯಕರ್ತರ ಜೊತೆಗೆ ಅವರ ನಡವಳಿಕೆ ಉತ್ತಮ ಬಾಂಧವ್ಯದಿಂದ ಕೂಡಿತ್ತು. ನಾನು ಅವರ ಜೊತೆಗೆ ಇದ್ದೇನೆ, ಅವರ

ಅಣ್ಣ-ತಮ್ಮಂದಿರ ರೂಪದಲ್ಲಿ ಇದ್ದೇನೆ. ಅವರು ನಮಗೆ ತಂದೆಯ ಸ್ಥಾನದಲ್ಲಿದ್ದರು, ಅವರ ವ್ಯಯುಕ್ತಿಕ ನಡವಳಿಕೆಗಳನ್ನು ನಾವು ಕಾಣುತ್ತಿದ್ದೆವು. ಇವತ್ತು ಉನ್ನತ ಸ್ಥಾನಗಳಿಗೆ ಹೋದಂತಹ ರಾಜಕಾರಣಿಗಳು ಅವರ ಜೀವನದ ಆ ನಡವಳಿಕೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಅವರು ಒಬ್ಬ ಉದಾಹರಣೆಯಾಗಿದ್ದರು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೇಯದಾಗಿ ರಾಜಕಾರಣಿಗಳಲ್ಲಿ ಚುನಾಯಿತ ಪ್ರತಿನಿಧಿ ಆತನ ನಿಷ್ಠೆ ಬಗ್ಗೆ ಇಡೀ ದೇಶದಲ್ಲೇ ಅನುಮಾನ ಪಡತಕ್ಕಂತಹ ಸ್ಥಿತಿಯಲ್ಲು ನಾವು ಕಾಣುತ್ತಿದ್ದೇವೆ. ಸನ್ಮಾನ್ಯ ವೈ. ರಾಮಕೃಷ್ಣರವರು ಚುನಾವಣೆ ಆದ ನಂತರ ನಮ್ಮೆಲ್ಲರ ಜೊತೆಗಿನ ನಡವಳಿಕೆ ಕಂಡಾಗ ಪಕ್ಷದ ಬಗ್ಗೆ ಕಾರ್ಯಕರ್ತರ ಬಗ್ಗೆ ವ್ಯಕ್ತಿ ಸಿದ್ಧಾಂತದ ಬಗ್ಗೆ ಅವರ ನಿಷ್ಠೆಯನ್ನು ನಾವು ಎಲ್ಲರೂ ಅನುಕರಣೆ ಮಾಡಬೇಕಾಗುತ್ತದೆ. ಇವತ್ತು ಚುನಾವಣೆಯಲ್ಲಿ ಗೆದ್ದ ನಂತರ ಯಾವ ಕಾರ್ಯಕರ್ತರು ಗೆಲ್ಲಿಸಿರುತ್ತಾರೆ, ಯಾವ ಪಕ್ಷದರು ಗೆಲ್ಲಿಸಿರುತ್ತಾರೆ ಅವರ ಬಗ್ಗೆ ನಿಷ್ಠೆಯನ್ನು ಕೆಳೆದುಕೊಂಡಂತಹ ಒಂದು ದುಸ್ಥಿತಿ ಇವತ್ತು ದೇಶದಲ್ಲಿ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಶ್ರೀ ವೈ. ರಾಮಕೃಷ್ಣರವರನ್ನು ನೆನಸಿಕೊಂಡರೆ ಒಬ್ಬ ಚುನಾಯಿತ ಪ್ರತಿನಿಧಿ ಹೇಗಿರಬೇಕು ಯಾವರೀತಿಯಾಗಿರಬೇಕು ಎನ್ನುವಂತಹ ಮಾರ್ಗದರ್ಶನವನ್ನು ಇವತ್ತು ಚುನಾಯಿತ ಪ್ರತಿನಿಧಿಗಳು ತೋರಿಸುತ್ತಿದ್ದಾರೆ ಎನ್ನುವ ನಂಬಿಕೆ ಕೂಡ ನನಗಿದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಬಿ.ಜೆ.ಪಿ.ಯವರು ಅವರ ಸ್ಥಾನವನ್ನು ತುಂಬುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಅಂಥ ಒಬ್ಬ ಹಿರಿಯ ಆದರ್ಶ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವ ಅಂಶವನ್ನು ಪುನಃ ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ನಮ್ಮ ಜಿಲ್ಲೆಯವರಾದ ಹಿರಿಯ ರಾಜಕಾರಣಿ ಎನ್. ಜಿ. ಹಾಲಪ್ಪನವರು, ವಿಶೇಷವಾಗಿ ಚುನಾವಣೆಯಲ್ಲಿ ಗೆದ್ದಾಗ ಅವರು ಬಂದು ನಮ್ಮ ಯುವಕರಿಗೆ ಬೆನ್ನು ತಟ್ಟುತ್ತಿದ್ದಂತಹ ರೂಪ ನಾವು ಯಾವ ಪಕ್ಷದಲ್ಲಿದ್ದೇವೆ. ಎನ್ನತಕ್ಕ ಕಲ್ಪನೆಯೇ ನಮಗೆ ಬರುತ್ತಾ ಇರಲಿಲ್ಲ. ಶ್ರೀ ಎನ್. ಜಿ. ಹಾಲಪ್ಪನವರು ಅಂದ ತಕ್ಷಣ ಯುವಕರೆಲ್ಲರಿಗೂ ಪ್ರೋತ್ಸಾಹ ಕೊಡತಕ್ಕಂಥ ಒಬ್ಬ ವ್ಯಕ್ತಿ ಎಂದು ನಾವು ಸ್ಪಷ್ಟವಾಗಿ ಗುರುತಿಸಬಹುದಾಗಿತ್ತು. ಒಂದು ಸಣ್ಣ ಮುನ್ಸಿಫಲ್ ಚುನಾವಣೆಯಲ್ಲಿ ರಾಜಕೀಯ ಬಡಿದಾಟ ಹೊಡೆದಾಟ ಕಾಣುತ್ತಿರತಕ್ಕ ಸಂದರ್ಭದಲ್ಲಿ ಯಾವುದೇ ರಾಜಕೀಯ ಪಕ್ಷ ಕೂಡ ಸೇವೆ ಮಾಡಬೇಕಾದರೆ ಪಕ್ಷದ ಒಂದು ವಿಚಾರವನ್ನು ತರಬಾರದು ಎನ್ನತಕ್ಕಂಥ ಒಬ್ಬ ಪ್ರಭಾವಿ ವ್ಯಕ್ತಿ ಶ್ರೀ ಎನ್. ಜಿ. ಹಾಲಪ್ಪನವರು. ಅದೇ ರೀತಿಯಾಗಿ ಅನೇಕ ಹಿರಿಯ ವ್ಯಕ್ತಿಗಳ ಸ್ಮರಣೆ ಇವತ್ತು ಮಾಡಿಕೊಳ್ಳುತ್ತಾ ಇದ್ದೇವೆ. ದಿವಂಗತ ಚಿ. ನಾ. ಮಂಗಳ ಅವರನ್ನು ಇವತ್ತು ಸ್ಮರಣೆ ಮಾಡುತ್ತಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ, ಸಾಹಿತ್ಯ

ಕ್ಷೇತ್ರದಲ್ಲಿ ಅವರ ಸೇವೆಯನ್ನು ನಾವು ನೆನಪು ಮಾಡಿಕೊಳ್ಳುತ್ತಾ ವಿಶೇಷವಾಗಿ ವಿಶ್ವ ಸುಂದರಿ ಸ್ಪರ್ಧೆಯ ಸಮಯದಲ್ಲಿ ಒಬ್ಬ ಭಾರತೀಯ ನಾರಿಯಾಗಿ ಅವರು ಕೊಟ್ಟಂತಹ ಹೇಳಿಕೆ ಸಂಸತಿಯ ಬಗ್ಗೆ ಅವರಿಗಿದ್ದು ಕಳಕಳಿ ಗೌರವವನ್ನು ನೆನಪುಮಾಡಿಕೊಂಡು ಎಲ್ಲಾ ಸಮಾಜದ ಇಡೀ ಬಂಧುಗಳು ಕೂಡ ಅವರನ್ನು ನೆನಪು ಮಾಡಿಕೊಳ್ಳಬೇಕು ಎನ್ನುವುದನ್ನು ಅವರ ವೈಚಾರಿಕತೆಯ ಸಿದ್ಧಾಂತಗಳಲ್ಲಿ ನಾವು ಕಾಣುತ್ತಿದ್ದೇವೆ. ಡಾ।। ತುಳಿಸಿಯವರು ಇಡೀ ಸಮಾಜದಲ್ಲಿ ಜಾತಿ ಜಾತಿಗೆ ಬಡಿದಾಡುವಾಗುವ ಸಂದರ್ಭದಲ್ಲಿ ಮೈತ್ರಿ ದಿವಸದ ಸಮಾರಂಭ ಹಾಗೂ ವಿಶೇಷವಾಗಿ ಮಹಾತ್ಮಾ ಗಾಂಧೀಯವರ ಸಮಾಧಿ ಹತ್ತಿರ ಕೈಗೊಂಡಿರತಕ್ಕ ಒಂದು ಕ್ರಿಯೆ ಇವತ್ತು ಇಡೀ ದೇಶಕ್ಕೆ ಅನುಕರಣೆಯಾಗಿದೆ ಎಂಬ ಮಾತನ್ನು ತಿಳಿಸುತ್ತಾ ಇನ್ನು ಶ್ರೀ ಶ್ರೀಕಾಂತ್ ಅಂಬಡಗಟ್ಟಿಯವರು ಯುವಕರು, ಉತ್ಸಾಹಿಗಳು ನಾನು ಒಮ್ಮೆ ಆ ಭಾಗದಲ್ಲಿ ಪ್ರವಾಸ ಮಾಡುತ್ತಾ ಇರಬೇಕಾದರೆ ಅವರು ಸಾಮಾನ್ಯ ಜನರಂತೆ ಚುನಾಯಿತ ಪ್ರತಿನಿಧಿಯೊಬ್ಬರು ಪಕ್ಷಭೇದ ಮರೆತು ಎಲ್ಲಾ ಜನತೆಗೆ ಕೆಲಸ ಮಾಡಿಕೊಡತಕ್ಕಂಥ ಅಂಶ ಆ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂತು ಅದೇ ರೀತಿಯಾಗಿ ಹಿರಿಯರಾದ ಶ್ರೀ ವಿಠಲದಾಸ್ ಶೆಟ್ಟಿ, ಶ್ರೀ ವೈ. ಮಂಜಯ್ಯ ಶೆಟ್ಟಿ ಡಾ।। ಭೋಜರಾಜ, ಶ್ರೀ ಪಿ. ವಿ. ಐತಾಳ್ ಇವರೆಲ್ಲರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ ನನಗೆ ಕಲಾವಕಾಶ ಮಾಡಿಕೊಟ್ಟ ತಮಗೆವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರೇ, ಹಿರಿಯ ಸದಸ್ಯರಾಗಿದ್ದ ಶ್ರೀ ವೈ. ರಾಮಕೃಷ್ಣರವರು, ನಾನು ಸಬಾಧ್ಯಕ್ಷನಾಗಿ ಸದನದ ಕಲಾಪಗಳನ್ನು ನಿರ್ವಹಣೆ ಮಾಡುವುದಕ್ಕೆ ನಿಯಮಾನುಸಾರ ಕಲಾಪ ನಡೆಸುವುದಕ್ಕೆ ಬಹಳ ಉಪಕಾರಿಯಾಗಿದ್ದರು. ಸಭಾಧ್ಯಕ್ಷ ಸ್ಥಾನದಿಂದ ನಾನು ಅನುಭರಿಸಿರತಕ್ಕಂಥ ನೋವನ್ನು ನಿಮ್ಮಗಳ ಜೊತೆಗೆ ಹಂಚಿಕೆ ಮಾಡಿಕೊಳ್ಳಲು ನಾನು ನನ್ನ ಮಾತಿನ ಮುಖಾಂತರ ಪ್ರಯತ್ನ ಪಡುತ್ತಿದ್ದೇನೆ. ಶ್ರೀ ಶ್ರೀಕಾಂತ್ ಅಂಬಡಗಟ್ಟಿಯವರು ಬಹಳ ಚಿಕ್ಕವಯಸ್ಸಿನವರು ಇದ್ದರು ಮೊದಲನೇ ಸಲ ಸ್ಥಾಯಿ ಸಮಿತಿಗಳನ್ನು ರಚನೆ ಮಾಡಿದಾಗ ಅವರ ಹೆಸರು ಬಿಟ್ಟು ಹೋಗಿತ್ತು, ಆ ಸಂದರ್ಭದಲ್ಲಿ ಶ್ರೀ ಕಲೂತಿ, ಶ್ರೀ ಪ್ರಕಾಶ್ ಹುಕ್ಕೇರಿ ಮತ್ತು ಶ್ರೀ ಶ್ರೀಕಾಂತ್ ಅಂಬಡಗಟ್ಟಿಯವರು ನನ್ನ ಹತ್ತಿರ ಬಂದು, ಶ್ರೀ ಅಂಬಡಗಟ್ಟಿಯವರು ಹೇಳಿದ ಮಾತು ಏನೆಂದರೆ ನಾನು ಕಷ್ಟದಲ್ಲಿದ್ದೇನೆ, ಬಹಳ ಕಷ್ಟದಲ್ಲಿ ಆರಿಸಿ ಬಂದಿದ್ದೇನೆ, ನಾನು ಸಾಮಾನ್ಯ ಕುಟುಂಬದಿಂದ ಬಂದವನು, ಯಾವುದೇ ಸಮಿತಿಯಲ್ಲಿ ಇಲ್ಲದೇ ಹೋದರೆ ನನಗೆ ಕಷ್ಟವಾಗುತ್ತದೆ ಎಂದು ಹೇಳಿದರು. ಆಗ ನಾನು ತಕ್ಷಣ ಅವರನ್ನು ಒಂದು ಸಮಿತಿಗೆ ನೇಮಕ ಮಾಡಿದೆ. ಸಾಂಪ್ರದಾಯಿಕ ಸಮಾಜದಲ್ಲಿ ಕರ್ತನ ಸ್ಥಾನದಲ್ಲಿ ನಿಂತು ಯಾರು ತನ್ನ ಕುಟುಂಬದ ಹಿರಿಯರ ಅಂತ್ಯಕ್ರಿಯೆ

ಮಾಡಬೇಕಾಗಿತ್ತೋ ಅವರು ಈ ಹುಡುಗನ ಅಂತ್ಯಕ್ರಿಯೆ ಮಾಡಬೇಕಾದರೆ ಅವರು ಅನುಭವಿಸಿರತಕ್ಕ ಯಾತನೆಯನ್ನು ನಾವು ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಸಂತಾಪದಲ್ಲಿ ಅದನ್ನು ಭರಿಸುವುದು ಸಾಧ್ಯವಿಲ್ಲ. ಆತನನ್ನು ಘೋಷಿಸಿ, ರಾಜಕೀಯದಲ್ಲಿ ಬೆಳಸಬೇಕಾಗಿದ್ದರೆ ಅನೇಕ ಜನ ಸ್ನೇಹಿತರು, ಹಿತಚಿಂತಕರು, ವಿಶ್ವಾಸಕರು, ಅವರು ಅನುಭವಿಸಿರತಕ್ಕ ನಷ್ಟವನ್ನು ಕೂಡ ನಾವು ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ. ಮನಸ್ಸಿಗೆ ಬಹಳ ನೋವಾಗಿದೆ ಆ ದಿವಸ ನನಗೆ ತಡವಾಗಿ ವರ್ತಮಾನ ಬಂತು, 7 ಗಂಟೆ ಪ್ರಯಾಣವಾದ್ದರಿಂದ ನಾನು ಅಂತ್ಯಕ್ರೀಯಯಲ್ಲಿ ಭಾಗವಹಿಸಲು ಅನುಕೂಲವಾಗಲಿಲ್ಲ ಶಿಕ್ಷಣ ಪಡೆದು ಕೊಂಡು ಹೆಣ್ಣು ಮಕ್ಕಳ ಬದುಕಿಗೆ ಹೊಸ ಆಯಾಮವನ್ನು ಕೊಡತಕ್ಕಂಥ ಪ್ರಯತ್ನವನ್ನು ಸತತವಾಗಿಮಾಡಿಕೊಂಡು ಬಂದಿರತಕ್ಕಂಥವರು ಚಿ. ನಾ. ಮಂಗಳ ಅವರು. ಶ್ರೀ ಆಚಾರ್ಯ ತುಳಸಿ ಅವರಂತೂ ಮೊದಲು ಮನುಷ್ಯನಾಗು ನಂತರ ನೀನು ಯಾವುದೇ ಮತಕ್ಕೆ ಸೇರು ಎಂದು ಇಡೀ ದೇಶಕ್ಕೆ ಸಾರಿ ಸಾರಿ ಹೇಳಿದಂತಹ ಮನುಷ್ಯ ಈ ಎಲ್ಲಾ ಮೃತರ ಗೌರವಾರ್ಥನಾಗಿ ನಾವೆಲ್ಲರೂ ಒಂದು ನಿಮಿಷ ಎದ್ದು ಮೌನ ಆಚರಿಸೋಣ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚಿಸಿದರು)

ಈ ಸಭೆ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕಟುಂಬ ವರ್ಗದವರಿಗೆಕಳುಹಿಸಲಾಗುವುದು. ಆಚಾರ್ಯ ತುಳಸಿಯವರ ಕುರಿತಾಗ ಮಂಡಿಸಲಾಗುವ ನಿರ್ಣಯವನ್ನು ಅವರ ಉತ್ತಾರಾಧಿಕಾರಿ ಯಾರಿದ್ದಾರೋ ಅವರಿಗೆ ಕಳುಹಿಸಲಾಗುವುದು. ಈಗ ಸಭೆಯನ್ನು ಮುಂದೂಡಲಾಗಿದೆ, ಪುನಃ ನಾಳೆ ಬೆಳಿಗ್ಗೆ 11-00 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 12 ಗಂಟೆ 10 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 29-7-97ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)